
ಯಕ್ಷಗಾನ

ಅಗ್ರಪೂಜೆ



ಶೃಂಗಾರ ಮುದ್ರಣ-ಪ್ರಕಾಶನ, ಹೊನ್ನಾವರ ಉ. ಕ.

ಬೆಲೆ-೧ ರೂ.

॥ಶ್ರೀ ಗಣೇಶಾಯ ನಮಃ॥

ಪಾಂಡವ ವಿಜಯ ಅಗ್ರಪೂಜೆ

ರಾಗ ಸಾಟಿ ಝಂಪೆ

ಜಯತು ಜಯ ಮಾರ್ತಾಂಡ | ಜಯತು ಜಗದೋದ್ದಂಡ | ಜಯತು ಜಯ ಸುರಸೇವ್ಯ | ಜಯತು ಮಹಭವ್ಯ ||ಪ|| ತ್ರಿಜಗಜನಸಂರಕ್ಷ | ತ್ರಿಜಗಾಧಿಪನ ಪಕ್ಷ | ಅಜಮುಖ್ಯಸುರವಿನುತ | ಭಜಿತ ಸುಪ್ರೀತಾ ||೧|| ಕಮಲಬಾಂಧವದೇವ | ಕಮನೀಯ ಕರಭಾವ | ಕುಮುದಸಖಸುಪ್ರೀಯ | ವಿಮಲತರ ಕಾಂತಿ ||೨|| ಮೂರು ಮೂರ್ತಿಸ್ವರೂಪ | ಕಾರುಣ್ಯಗುಣದೀಪ | ಭೂರಿನಿಗಮ ವಿನೋದ | ಸೂರಿನುತಪಾದಾ ||೩|| **ಭಾಮಿನಿ** — ಶಾರದೆಯ ಬಲಗೊಂಡು ಸುಮನಸ | ವಾರಕಭಿವಂದಿಸುತ ಶ್ರೀಚರ | ಣಾರವಿಂದಕೆ ನಮಿಸಿ ವ್ಯಾಸಾ ವ್ಯಾದಿಮುನಿವರರ || ಚಾರುಪದಕೊಂದಿಸುತ ವಾಯುಕು | ಮಾರನನು ಕೊಂಡಾಡಿ ನಾಮ | ತ್ರಾರುಮುಖವುಳ್ಳವನನರ್ಚಿಸಿ ಕೃತಿಯನೆಸಗುವೆನು ||೧||

ರಾಗ ಸೌರಾಷ್ಟ್ರತಾಳ ತ್ರಿವಿಡೆ

ಅನಘ ಜನಮೇಜಯನೃಪಂಗಾ | ಮುನಿಪವೈಶಂಪಾಯನಾಖ್ಯನು | ಜನಪಕುಂತೀಸುತಚರಿತ್ರವ| ವಿನಯದಿಂದಾ ||೧|| ಉಸುರುತಿರೆ ಬೆಸಗೊಂಡ ಪಾಂಡವ| ರಸಮಬಲಮಾಗಧನ ಸಮರದಿ| ಪೆಸರನಡಗಿಸಿ ಮಿಕ್ಕ ಭೂಮಿಪ| ವಿಸರವನ್ನು ||೨|| ಸರಿಸುತುತ್ತಮ ರಾಜಸೂಯವ | ವಿರಚಿಸಿದರೆಂತವಮ ಮಾಗಧ| ಧರಣಿಪಾಲನದಾರು ಸಾಂಗದಿ ಕರುಣಿಸೆನಲೂ||೩|| ತಾಪಸೋತ್ತಮ ಶೋಪದಿಂದಾ | ಶ್ರೀಹರಿಯ ಪಾದಾರವಿಂದವ | ತಾ ಪದುಳದಿಂ ನೆನೆದು ಸುದರ್ಶನು / ಭೂಪನೊಡನೆ ||೪||

ವಾರ್ಧಿಕ್ಯ— ಧರಣೀಶ ಕೇಳಿಲ್ಲಿ ಪರ್ಯಂತ ಪಾಂಡವರ | ಚರಿತವನ ಒರೆವೆ ಮುಂಗಥೆಯ ನಾನೆಂದಪೆಂ | ಧುರಧೀರ ಮಾಗಧನ ವೃತ್ತಾಂತವ ಮೊದಲೆ | ಪೇಳ್ವೆ ನಾ ಕೇಳು ನೀನು || ಧರಣಿಯೊಳು ಮಗಧದೇಶದಿ ಶೋಭಿಸುತ್ತಿರ್ಪ | ವರಗಿರಿವ್ರಜವೆಂಬ ಪುರದಿ ಸಂತೋಷದಿಂ | ದಿರುತಿರ್ದನ ಬೃಹದ್ರಥನೆಂಬವಂ | ಸಿರಿಯೊಳಿಂದ್ರಗೆ ಸಮಾನನೆನಿಸಿ ||೧||

ಭಾಮಿನಿ— ಅರಸ ಕೇಳ್ಕಾಶೀಶ್ವರಾತ್ಮಜೆಯರು ಕಲಾವತಿ ಭಾನುಮತಿ ಎಂಬರು ಮಹೀಪಾಲಕಗೆ| ರಾಣಿಯರಾಗಿ ರಂಜಿಸಲು|| ತರಳರಹಿತವ್ಯಥೆಯೊಳೊಂದಿನ| ಧರಿಸಿ ನೃಪ ಮೌನಸ್ಥನಾಗಿರೆ| ಧರಣಿಪನ ನುಡಿಸಿದಳು ಹಿರಿಯವಳಧಿಕ ವಿನಯದಲಿ|| **(ರಾಗ ಕೇದಾರ ಗೌಳ ಅಷ್ಟತಾಳ)**

ರಮಣ ಕೇಳ್ ನಿತ್ಯದಿ ಶಶಿಯ ನಿಂದಿಪ ನಿನ್ನ| ಸುಮುಖವಿಂದಿಪ ದಿನದಿ|| ವಿಮುಖವಾಗಿರುವ ಕಾರಣವೇನು ಪೇಳೆನೆ| ರಮಣಿಗೆಂದನು ಖೇದದಿ||೧|| ಇಂದುವಿಲ್ಲದ ರಾತ್ರಿಯರವಿಂದ ವಿರಹಿತ| ದಿಂದಿರ್ಪಕೊಳನಂದದಿ|| ನಂದನರಿಲ್ಲದಾತನ ಬಾಳ್ವೆ ಎಂಬುದ| ರಿಂದ ಚಿಂತಿಪೆ ಮನದಿ ||೨|| ಎನಲೆಂದಳರಸ ಕೇಳ್ ದುಃಖಂಗಳೇತಕೆ| ತನಯರಪ್ಪರೆ ಪೂರ್ವದಿ|| ಮನುಮಥಾರಿಯ ಪೂಜಿಸಿದ ಫಲಬೇಕೆನೆ| ವನಿತೆಗೆಂದನು ದುಃಖದಿ||೩||ಸತಿಯೆ ಕೇಳ್ ಮಕ್ಕಳಿಲ್ಲದೆ ನಾಕವಿಲ್ಲೆಂದು| ಶ್ರುತಿಮತವೆನ್ನ ಮೇಲೆ| ಕ್ಷಿತಿಯ ಪಾಲಿಪರ್ಯಾರು ಎನಲೆಂದಳಾಗ ಭೂಪತಿಗೆರಡನೆಯಬಲೆ||೪|| ಅರಸಕೇಳ್ ನಿನ್ನಯ ನುಡಿ ಸತ್ಯಗರ್ಭವ| ಧರಿಸಿ ಬಾಲರ ಪಡೆದು|| ವರಪುಷ್ಪಯುತವಾದ ಲತೆಯ ಪೋಲ್ಕೆರೆಯುವ ತರುಣಿಯ ಪುಣ್ಯವದು||೫|| ಮೊಲೆಯುಸಿತ್ತಪ್ಪಿ ಮುದ್ದಿಸಿ ತೊಟ್ಟಿಲೊಳಗಿಟ್ಟು|ಸಲೆಜೋಗುಳವ ಪಾಡುತ್ತ||ನೆಲೆ ಇಲ್ಲದಾನಂದದಿಂದಿರ್ಪುದೆಲ್ಲರ್ಗೆ||ದೊರಕುವದಿಲ್ಲಕಾಂತ||೬||ಎನಲೆಂದನಬಲೆ ಕೇಳ್ ಬಾಲಕರಿಲ್ಲದ| ಮನೊಯೊಳಗಿಹುದರಿಂದ|ತೊರೆದು ಸಂಸಾರವ ವನವನ್ನು ಸೇರ್ಪುದೇ|ಘನಸೌಖ್ಯ ಮನುಜಗೆಂದ||೭|| **ಭಾಮಿನಿ—** ವನಿತೆಯರಿಗಿಂತೊರದು ಸಚಿವರ| ಘನತವಕದಿಂಕರಸಿ ನುಡಿದನು| ವನಕೆ ಪೋಪೆನು ರಾಜ್ಯವನು ನೀವಾಳಿ ಎಂದೆನುತಾ|| ಅನುಮತಿ

ಯು ನೆರೆಪಡೆದು ಮುನಿಗಳ| ನನವರತವಾಶ್ರಯಿಸಿ ಸದ್ಗತಿ| ಯನು ಪಡೆವೆ
ನೆಂದೆನುತ ಸತಿಯರ ಕೂಡಿ ಪೊರಮಂಟ||೧||

(**ರಾಗ ಸಾಂಗತ್ಯ|ತಾಳ ರೂಪಕ**)

ಅರಸ ನೀಪರಿಯಿಂದ ವನಕೆಂದು ಪುರದಿಂದ! ಪೊರಮಟ್ಟು ಬರೆ ಮುಂದೆ ಪಥ
ದಿ||ವರವಿಶ್ವಾಮಿತ್ರನ ಕಂಡಡಿಗೆರಗಲು ಪರಸುತ್ತ ಪೇಳ್ದ ಸಂತಸದಿ||೧||ಜನ
ನಾಥ ಕೇಳ್ ಸತಿಯರು ಸಹ ಚತುರಂಗವನು ಬಿಟ್ಟು ಪಯಣವಾಪೆಡೆಗೆ||ಎನ
ಗೆ ಪೇಳ್ ನಿನ್ನಯ ಮುಖವ್ಯಾಕೆ ಕುಂದಿರ್ಪು| ದೆನಲೆಂದ ವಂದಿಸಿ ಮುನಿಗೆ
||೨||ತರಳರಿಲ್ಲದೆ ಮರ್ತ್ಯಗಿಹಪರವೆರಡರೊಳ್ ದೊರೆವುದೆ ಸುಖವದರಿಂದ|
ಪೊರಟೆನುವನಕೆ ಸದ್ಗತಿಯ ನಾರ್ಜಿಪೆ ನಿಮ್ಮ| ವರ ಸೇವೆಯಿಂದೆನಲೆಂದ||೩||
ಅರಸ ಕೇಳ್ ನಿನ್ನಯ ನುಡಿ ಸತ್ಯ ಸಂಸಾರ| ತರುವು ಸಂತಾನ ಪುಷ್ಪವನು|
ಹೊರತು ಶೋಭಿಪುದಿಲ್ಲ ನಿನ್ನಿಷ್ಟವನು ಶಂಭು ಕರುಣಿಪ ನೆನುತ ಕೌಶಿಕನು
||೪||ಜನಪನ ಸಂತೈಸಿ ಪರಮಾತ್ಮ ಪಾದಾಬ್ಜವನು ನೆನೆಯುತ್ತಿರಲಾಗ||ಇನಿ
ತಾದ ಮಾವಿನ ಹಣ್ಣೊಂದು ಬಿದ್ದುದು ಮುನಿಪನಂಕದೊಳತಿ ಬೇಗ||೫|| ತೆರೆ
ದು ಕಂಗಳನು ಹಣ್ಣನು ಭೂಪಗಿತ್ತೆಂದ| ನೆರೆ ನಿನ್ನ ಮನದಿಷ್ಟವಹುದು| ಮ
ರೆಯ ಮಾತಲ್ಲ ನಿನ್ನರಸಿಯರ್ಗೀಯೆನೆ| ಎರಗಿದ ನೃಪತೋಷವೆರೆದು||೬||

ವಾರ್ಧಿಕ— ಚರಣದೊಳ್ ಬಿದ್ದ ಭೂಪನ ನಪ್ಪಿ ಗಾಧಿಜಂ|ಪರಸಿ
ಬೀಳ್ಕೊಟ್ಟನುತ್ಸಹದಿಂ ಮಹೀಶ್ವರಂ|ಪುರಕೈದಿ ಪತ್ನಿಯೋರ್ವಳಿಗೀಯೆ ಭೇದ
ಮಂ ಮಾಡಿದಘ ಬರ್ಪುದೆಂದೂ|| ಭರಿತ ಸಂತೋಷದಿಂ ಸೌಧಪ್ರವೇಶವಂ|ವಿ
ರಚಿಸುತ ಚೂತ ಫಲಮಂ ಭಾಗಮಂ ಮಾಡಿ| ತರುಣಿಯರಿಗಿತ್ತಾ ಪರೀಕ್ಷಿತ
ಕುಮಾರ ಕೇಳ್ ಮುಂದಾದ ಕೌತುಕವನೂ||

ಭಾಮಿನಿ— ಧರಿಸಿದರು ಗರ್ಭವನು ಭೂಮಿಪ| ನರಸಿಯರು ಸೀ
ಮಂತ ಮೊದಲಹ|ಪರಮ ಶುಭಕರ್ಮವನು ಮಾಡಿಸಿದನು ಮಹೀಪಾಲ||ಇರು
ತಿರಲು ನವಮಾಸ ತುಂಬಿದು|ದರಸ ಕೇಳ್ ಸೀಳೆರಡ ಬಿಸನಾ||ದರು ಕಲಾವತಿ
ಭಾನುಮತಿಯರು ಸೂತಿಕಾಗ್ರಹದಿ||೧||

(ರಾಗ ಭೈರವಿ ತಾಳ ಝಂಪೆ)

ಎರಡು ಸೀಳುಂದಿಸಿದುದ| ತರುಣಿಯರು ಪರಿಕಿಸುತ| ಅರಸಗರುಹಲು ಕೇಳಿ ಭರದಿ ನಡೆತಂದೂ||೧|| ತನುಜನಿರವನು ಕಂಡು| ಘನಖೇದ ಗೊಳುತೆಂದ| ಜನರೆಲ್ಲ ನೋಡಿದಿರೆ ಘನರಾದ್ಭುತವಾ ||೨|| ಮುನಿಪನಿತ್ತನು ಫಲವ| ತನುಜರುದಿಸುವರೆಂದು| ಘನತೋಷಗೊಂಡಿರ್ದೆ ಮನದಿ ನಾನಿರುತಾ ||೩|| ಜಾತಾರೂಪವ ಕಂಡು|ಪ್ರೀತಿ ಬಡುವರೆ ಜಗದಿ| ಪಾತಕಿಗಳಿಂಗಹುದೇಬೀತುಪದಭಿಲಾಷೆ ||೪|| ಎನುತ ಚರಜನರಿಂಗೆ| ಜನಪ ನೇಮವನಿತ್ತ|ತನುಭವನ ಸೀಳ್ಗಳಿರದನುಬಿಸುಡಿರೆನುತಾ||೫||

ಕಂದಪದ— ಅರಸನ ನೇಮಂವಚಾರರ್ ಧರಿಸುತ|ಸೀಳಿರಡಂಕೊಂಡೈದಳಲುತ್ತಂ|ಗೋಪುರದಾಚೆಗೆ ಬಿಸುಡುತ ತಾವ್| ತಿರುಗಿ ಪೊಕ್ಕರ್ನಿಜಗ್ರಹಮಂ ಜಿಂತಿಸುತಂ || **ವಾರ್ಧಿಕ್ಯ**—ಅರಸ ಕೇಳಾದುದನಿತರೊಳಸ್ತ್ರಮಯ ಸಮಯ| ಮರವಿಂದ ತಲೆ ಮುಗ್ಗಿದವು ಘೂಕ ಸಂಕುಲಂ ಪರಿಕಿಸಿದವೆಣ್ದೆಸೆಯು ನುರಿದುಳಿದ ಕೆಂಡಮೆನೆ| ತರಣಿ ಮಂಡಲವೆಸದುದೂ|| ಧರೆಯನಾವರಿಸಿತು ತಮಸ್ಸಂಘ ಚಾರೆಯರ್| ತಿರುಗ ತೊಡಗಿದರು ತನ್ನೊಳ್ಪೊಕ್ಕ ಕತ್ತಲೆಯು|ಹರಿಪ ಭಾಸ್ಕರನ ಚಾರಕರೆಂಬ ವೋಲ್ ದೀಪನಿಕರ ಮನೆ ಮನೆಗೆಸದುದೂ||೧||

(ರಾಗ ಕೇತಾರಗೌಳ ಅಷ್ಟತಾಳ

ಇಂತೆಸವ ಯಾಮಿನಿಯೊಳೂ|ಜನರು ಗತ ಜಿಂತೆಯಿಂ ಪವಡಿಸಿರಲೂ|| ಅಂತಕನ ಸಹಚರಿಯೋಲೂ ಮೆರೆವಜರೆ ಸಂತಸದಿ ನಡುವಿರುಳೊಳೂ ||೧|| ಹುಡುಕುತ್ತ ಮಾಂಸವನ್ನೂ| ಮಾನಸದಿ| ನುಡಿದಳೀ ದಿನದಿ ನರನೂ|| ತೊಡಕಿದರೆ ಯನ್ನ ಕೈಗೆ ಸತ್ವರದಿ ಪಿಡಿದವನ ಕೊಂದು ಮೇಗೆ ||೨|| ಎದೆಯ ಗುಂಡಿಗೆಯ ಮುರಿದೂ| ನುಗ್ಗರಿದು| ಬದಿಯಲುವ ಕರುಳ ತೆಗೆದೂ || ಕುದಿಸಿ ಪಾಕವನು ಮಾಡಿ| ಭುಂಜಿಸುವೆ| ಮುದದಿ ಬಂಧುಗಳ ಕೂಡಿ ||೩|| ಎನುತಸುರೆ ಮುಂದೆ ಬರುತಾ | ಈ ಭೂಪತನುಭವನ

ನೀಳ್ ಕಾಣುತಾ || ಮನದೊಳಾಶ್ಚರ್ಯಗೊಳುತಾ | ನೀಳ್ದವರ್ | ತ್ರಿನೆಲಿಲ್ಲ ವ್ಯಾಕೆನ್ನುತಾ || ೪ || ತುಡುಕುವಾ ನೀಳೆರಡನೂ | ಸಂಧಿಸಲು | ಮಿಡುಕೀರಿ ಭೂಪಸುತನೂ || ಗುಡುಗು ಜರಿವಂತೊದರಲೂ| ರ್‍ಘೀಂಕಿಸಿತು| ಕಡು ರಭಸವಾ ನಿಶೆಯೊಳೂ|| ೫ || **ವಾರ್ಧಿಕ್ಯ—** ಜನಮೇಜಯಾಖ್ಯ ಭೂಪಾಲನೀ ಲಾಲಿಸೈ| ಜನರೆಲ್ಲ ನಿದ್ರೆ ತಿಳಿದೆದ್ದೂರ .ಬಾಹ್ಯದೊಳ್ | ಘನಶಬ್ದವೇನೆಂದು ದೀವಿಗೆಯು ಬೆಳಕಿನಿಂ ಬಂದು ಖಳೆಯುನ್ನು ಕಂಡೂ||ಮನದೊಳಂಜುತ್ತ ಹಿಂಜರಿಯೆ ಸುಪ್ರೇಮದಿಂ | ದನುಜೆ ಕರೆದೆಂದಳೀ ಬಾಲಕಂ ಮತ್ಸುತಂ | ಜನಪ ಬರಲೊಡನೀತನಂ ಕೊಡುವೆನೆನೆ ಚಾರರೊರೆಯೆ ನೃಪನೈತಂದನೂ || ೧ ||

(ರಾಗ ಸೌರಾಷ್ಟ್ರ ತಾಳ ತ್ರಿವಿಡೆ)

ಬಂದ ಭೂಪಾಲಕನ ನೀಕ್ಷಿಸು | ತೆಂದಳಸುರೆ ಮಹೀಶ ಕೇಳ್ತವ ನಂದನನ ನೀಳೆರಡ ನೀಗಾ | ಪೊಂದಿಸಿದೆನೂ || ೧ || ಕರೆವುದೀತಗೆ ನನ್ನ ಪೆಸರಲಿ ಜರೆಯೆನಿಪ ಅಭಿಮಾನ ಯುನ್ನದು | ವರಜರಾಸಂಧಾಖ್ಯನಿವ ರಿಪು | ಹರನೆನಿಪನೂ || ೨ || ಎನುತ ಬಾಲನ ಕೊಡಲು ಮನ್ನಿಸಿ | ದನುಜೆಯನು ಪುರಕೊಯ್ದು ತನ್ನಯ| ತನುಜ ಸಹಿತೆಸದಿರ್ದ ಮನೆಯೊಳು ಜನಪ ಮುದದೀ || ೩ || **ವಾರ್ಧಿಕ—** ಜನಮೇಜಯಾಖ್ಯ ಕೇಳೈ ಯುಧಿಷ್ಠಿರ ನೃಪಂ| ಜನಪ ಕೌರವನಿಂದ ದಾಯಭಾಗಂ ಗೊಂಡ| ಅನಿಮಿಷೇಂದ್ರಪ್ರಸ್ಥಕರಸಾಗಿ ರಾಜ್ಯಮಂ ಸಲಹುತಿರೆ ಹರಿಯು ದಯದೀ | ವಿನಯದಿಂ ಮಯಬಂದು | ಪುರವ ಶೃಂಗರ ಗೈದು | ಅನಿಲಜಾರ್ಜುನರಿಂಗೆ| ಗದೆ ದೇವದತ್ತಮಂ | ಕೊಟ್ಟು ಪುರಕೈದಲಿತ್ತಲವರೆಡೆಗೆ ನಾರದನೊಂದಿನಂ ಬಂದನೂ ||೧|| ಕಂದಪದ್ಯ—ಸುರಮುನಿ ಬಂದುದ ಕಂಡಾ ಧರಣಿಪ ಪೀಠವ ನಿಳಿದನುಜರು ಸಹ| ಮುನಿಯಂ ಕರತಂದಾಸನವಿತ್ತುಪಚರಿಸಲ್ ಪದಸುತ ನಾರದ ಯಮಜನೊಳೆಂದಂ ||೧||

(ರಾಗ ಶಂರಾಭರಣ ಏಕತಾಳ)

ಭೂಮಿಪಾಲ ಕೇಳು ನಿನಗೆ| ಕ್ಷೇಮವೆ ಭೀಮಾದ್ಯರ್ನಿನ್ನ| ನೇಮದಂತೆ ಇಹರೆ ಸುಖವೆ ಸೀಮೆಯೊಳೆಲ್ಲಾ||೧||ಸ್ವಾಮಿ ತಮ್ಮ ದಯದಿಸರ್ವ| ಸೀಮೆ ಸುಖದೊಳಿಹುದು ಪಾರ್ಥ|ಭೀಮನಕುಲರೆಲ್ಲ ಎನ್ನ·ನೇಮಕೆಡರಿಲ್ಲ||೨||ಅರಸುತನದ ನೀತಿಗಳನು| ತರಣಿಜಾತಸುತಗೆ ವಿಧಿಯ | ತರಳ ಸಾಂಗವಾಗಿ ಪೇಳ್ದಹರು ಷದಿಂದಲೀ||೩|| ಅರಸ ಮಂಗುಳಿ ಕೇಳ್ದ ನೀಗ | ತಿರುಗಿದೀರೆಲ್ಲೆಲ್ಲಿ ನಿಮ್ಮ|ಬರವಿದೆಲ್ಲಿಂದಾದುದೆಂದು ಕರುಣದಿ ಪೇಳೈ||೪||ವನಜನಾಭ ರುದ್ರ ಕಮಲ|ತನುಜ ಶಕ್ರರೂರ ತೊಳಲಿ|ಇನಜಪುರವ ಪೊಕ್ಕುಬಂದೆ| ಜನಪ ಕೇಳೆಂದಾ||೫||ಮುನಿಪ ಕೇಳು ನಮ್ಮ ಪೂರ್ವ| ಜನಪರಾರ ಪುರದೊಳಿರ್ಪ|ರ್ಜನಕನಾವ ನಗರವಾಸಿ| ಎನಿಸೀರ್ಪನೆಂದಾ ||೬|| ಅನಿಮಿಷೇಶ ಪುರದಿ ಪೂರ್ವ|ಜನಪರಿಹರು ಸುಖದಿನಿಮ್ಮ|ಜನಕ ಯಮನಪುರದಿದುಃಖಿ। ಎನಿಸಿರ್ಪನೆಂದಾ ||೭|| ಇನಜ ಪುರದೊಳ್ಯಾಕೆ ವಾಸ| ಜನಕಂಗಯ್ಯೊ ಸರ್ವ ಕಷ್ಟ | ಜನಪರೊಳಾರ್ಪಿರಿದು ಸುಖಿಗಳೆನಗೆ ಪೇಳೆಂದಾ ||೮|| ವರಹರಿಶ್ಚಂದ್ರಾಖ್ಯಭೂಪ | ಸುರಪಗಿಂತ ಸುಖದೊಳಿರ್ಪ| ಸುರರು ಆವನ ಬಹಳ ಸ್ತುತಿಸುತ್ತಿರುವರ್ಕೇಳೆಂದಾ ||೯|| ಪಿರಿದು ಸೌಖ್ಯವಾ ತ್ರಿಶಂಕು| ತರಳಗೆಮ್ಮಯ್ಯಂಗೆ ದುಃಖ| ದೊರಕಿತ್ಯಾಕೆ ಪಿತನ ಕಷ್ಟ ಹರಿವುದೆಂತೆಂದಾ ||೧೦||

ವಾರ್ಧಿಕ— ಈ ತೆರದೊಳಾ ಭೂಸಬೆಸಗೊಳಲ್ ಪ್ರೇಮದಿಂದಾ ತಾಪ ಸೋತ್ತಮಂ | ಪೇಳ್ದನೆಲೆ ರಾಯ ಕೇಳ್ ಆ ತರಣಿ ವಂಶಜಂ ರಾಜಸೂಯಾಧ್ವರದಿ ಪಿರಿದು ಸೌಖ್ಯವ ಪಡೆದನೂ || ಭೂತಳಾಧಿಪ ಪಾಂಡುವಿಗೆ ಕುಷ್ಠರೋಗದಿಂ| ಪ್ರೇತ ಪತಿಪುರಪಾದುದಾ ಮಹಾಯಜ್ಞಮಂ | ನೀತಳುಮವದೆಸಗೆ ನಿಮ್ಮಯ್ಯಗಾತನವೊಲ್ ಘನಸೌಖ್ಯವಹುದೆಂದನೂ ||೧||

ವಚನ— ಈ ರೀತಿಯಿಂದಾ ನಾರದರು ಹೇಳಿ ಹೋಗಲು ಧರ್ಮರಾಜನು ತನ್ನ ಸಹಜಾತರೊಡನೆ ಇಂತೆಂದ—

(ರಾಗ ನೀಲಾಂಬರ ಆದಿತಾಳ)

ಆನುಜರಾಲಿಸಿದಿರೆ ಪಾಂಡು ಜನಪ ಯಮುನ ಪುರದೀ || ಘನದುಃಖ ದಿಂದೀರ್ಜನೆಂದು ಮುನಿಪ ಪೇಳ್ದ ಭರದೀ ||೧|| ಅರಸರಲ್ಲಿ ಧರ್ಮಸುತಗೆ ಸರಿ ಇಲ್ಲೆಂದು ಜನರು || ಒರೆವರಯ್ಯ ಇಂತು ನವೆಯುತಿರಲು ನಗರ ಸುರರೂ ||೨|| ರಾಜಸೂಯುವನ್ನು ಮಾಡೆ ರಾಜಿಪೇಂದ್ರಪುರದೀ | ತೇಜಸ್ವಿಯಾಗಿರುವನಂತೆ ರಾಜಪಾಂಡು ಮುದದೀ ||೩|| ಮನದೊಳದಕೆ ಮುಖವ ಮಾಳ್ಪೆನೆನುತ ಸಂಕಲ್ಪವನೂ||ಅನುಕರಿಸಿದೆ ನಿಮ್ಮ ಮತವೇನೆನುತ ನುಡಿದ ನರನೂ ||೪||

ಭಾಮಿನಿ— ಕಾಲನಂದನ ಕೇಳ್ದರೀತ್ರೀ ಪಾಲರೆಲ್ಲರ ಸದೆದು ಮಾ ಡುವ ಶೀಲಮುಖವಿದು ನಮ್ಮ ಮತದಿಂದೆಸಗೆ ನೆರೆದಪುದೇ || ನೀಲಕಂಧರ ಮಿತ್ರಮುನಿಕುಲ ಪಾಲ ವರಗೋಪಾಲ|ಲಕ್ಷ್ಮೀ ಲೋಲನಿದಕನುಕೂಲನಾದರೆ ಮುಖವ ತೊಡಗೆಂದಾ ||೧|| **ವಾರ್ಧಿಕ್ಯ**— ನರನೆಂದ ವಾಕ್ಯವಂ ಕೇಳ್ದು ಸಂತೋಷವಂ ಧರಿಸುತ್ತ ನೃಪನಿಂದ್ರಸೇನಂಗೆ ನೇಮಂವಂ| ಕರುಣಿಸಿ ದನಚ್ಯುತನ ಪುರಕ್ಕೈದಿ ಒಡಗೊಂಡು ಬಾ ಎನುತವಂ ಮುದದೊಳೂ || ವರರಥಾರೂಢನಾಗತಿವೇಗದಿಂ ಬಂದು ಹರಿಯ ಪುರವಂ ಪೊಕ್ಕು ಸಭೆಗೆ ಪಡೆತಂದು ಮುರ | ಹರನೋಲಗಂಗೊಂಡಿರಲ್ ಕಾಲ್ಗೆರಗೆ ಬಂದ ಪದನವಂ ಕೇಳ್ದು ಬಳಿಕಿಂತೆಂದನೂ ||೧||

(ರಾಗ ಮುಖಾರಿ ಆದಿತಾಳ)

ಕೇಳು ಕೇಳಯ್ಯ ಪೇಳ್ವ ಮಾತಾ|ವಸುದೇವಜಾತಾ | ಕೇಳುಕೇಳಯ್ಯ ಪೇಳ್ವಮಾತಾ || ಪಲ್ಲ || ಸುರತಾಪಸೇಂದ್ರ ನಿನ್ನೆ ಬಂದು| ಪೇಳಿದ ಪಾಂಡುಧರಣೀಶಗಿಲ್ಲ ನಾಕವೆಂದೂ ||ಅರಸನದಕೆ ಮನಮರುಗಿಯೆ ರಾಜ— ಸೂಯವನೆಸಗೆ ನಿಮ್ಮನುಮತಿಯರಿಯಲು ಕರೆತಹುದೆಂದೆನುತಟ್ಟಿದನೆನ್ನನು ಕರುಣಾನಿಧಿ ನೀ ಬಿಜಯಂಗೈ ಎಂದನು||೧||

ಕಂದಪದ್ಯ—ಅನ್ನೆಗಂ ಮಾಗಧನ ಸೆರೆಯೊಳ್ ಬನ್ನಂಬಡುತಿಪ
ನೃಪರಟ್ಟಿದ ದೂತಂ || ತಾ ಪನ್ನಗಶಯನನ ಪಾದದ ಸನ್ನಿಧಿಗೈದುತಾ
ಬಿನ್ನಯಿಸಿದ ಬಂದುದನೂ ||೧||

(ರಾಗ ಸಾರಂಗ ಅಷ್ಟತಾಳ]

ಮುರವೈರಿ ಲಾಲಿಸಯ್ಯಾ | ಕೃಪಾಕರ | ನರಕಮರ್ದನ ಮಾಪ್ರಿಯ ||
ಧರಣೀಶಮಗಧನ ಸೆರೆಮನೆಯೊಳಗಿರ್ಪ ಅರಸರ ಹುಯ್ಯಲನು ನಾ ಪೇ
ಳ್ವೆನೂ ||೧|| ಸಮರದೊಳಗೆ ತಮ್ಮನೂ | ಭಂಗಿಸಿ ತಂದಾ ಕುಮತಿ
ಜರಾಸಂಧನೂ | ರಮೆಯ ವಲ್ಲಭನೆ ಕೇಳ್ ಸೆರೆಯೊಳಗಿಟ್ಟಿಹ ಮಮತೆಯಿಂ
ಬಿಡಿಪರನ್ನೂ | ಕಾಣೆವು ನಾವು ||೨|| ಧರೆಯ ಭಾರವನಿ
ಳುಹೇ | ಭಕ್ತಾಭೀಷ್ಟ | ಕರುಣದಿಂದಲಿ ಪೊರೆಯೇ | ಹರಿಯೆ ಮಾನವನಾಗಿ
ಜನಿಸೀರ್ಪನೆಂಬುದ ಸುರಮುನಿ ನಾರದನೂ || ಪೇಳಿದನೂ ||೩||
ಅದರಿಂದವೆಲ್ಲರೀಗಾ ವಂದಿಸುವೆವು| ಸದೆದು ಮಾಗಧನ ಬೇಗಾ || ಉದಧಿ
ಶಯನನೆ ನಮ್ಮ ಬಂಧನವನು ನೀನೆ ಮುದದಿಂದ ಬಿಡಿಸೆಂದರು |
ಭೂಮಿಪರೂ ||೪||

ಕಂದಪ್ಯ— ಅರಸರ ದೂತನ ಮಾತಂ ಮುರಹರಂ ಕೇಳುತ ಸದ್ಬು
ನಿಮ್ಮಯ ಸೆರೆಯಂ ಬಿಡಿಸುವೆನೆನ್ನುತ ಯದುಕುಲ | ವರನುಸುರಿದನೇ
ದೊರೆಯೆನ್ನುತ ಕಳುಹಿದಿದಂ ||೧||

(ರಾಗ ಕಾಂಬೋಧಿ ಝಂಪೆ ತಾಳ)

ಇಂತೆಂದು ಪೇಳುತ್ತಲಾ ಮುರವೈರಿ|ಕುಂತಿಯಣುಗರ ದೂತಗಂ ಮಾ
ಸಂತಸದಿಕರದೆಂದನಾಳೆ ಪೋಗುವದೀಗ|ನೀತೆರಳು ಮಮ ಸದನಕಿಂದು||೧||
ಕರದು ಬಲಭದ್ರ ಮುಖ್ಯರಿಗೆಂದ ನಾನಾಳೆ|ತೆರಳುವೆನು ಪಾಂಡವರ ಬಳಿಗೆ||
ಪುರವ ಚನ್ನಾಗಿ ಕಾದಿಹುದೆಂದು ಬೀಳ್ಕೊಟ್ಟು| ಸರ್ವನು ತಮ್ಮ ತಮ್ಮ
ಮನೆಗೇ ||೨||

(ರಾಗ ದ್ವಿಜಾರತಿ ತಾಳ ಝಂಪೆ)

ಮನೆಗೆ ಸರ್ವರ ನಿಂತು ಕಳುಹಿ ಮಾಧವನೂ। ವನಿತೆ ಸತ್ರಾಜಿತ್ರನ ಸುತೆಯು ಭವನವನೂ ॥ ಘನವೇಗ ಪೊಕ್ಕವಳ। ವೆರಸಿ ಮಂಚದೊಳು। ವಿನಯದಿಂದಲಿ ಕುಳಿತು ನುಡಿದ ದೇವಿಯೊಳೂ ॥೧॥ ತರುಣಿಕೇಳ್ ಧರ್ಮಸುತ ರಾಜಸೂಯವನು। ವಿರಚಿಪಡೆ ಕರೆಸೀರ್ಪ ಪೋಗಬೇಕಾನು ಧರಣಿಪತಿ ಮಾಗಧನ ಸೆರೆಯುಮನೆಯೊಳಗೇ। ಇರುವ ಭೂಪರ ಪೂರು ಬಂದಿಹುದು ನಮಗೇ ॥೨॥ ಎನಲಿಂತಳರಸ ಕೇಳ್ ತನಗಿಲ್ಲದಿರುವಾ। ಜಿನುಗು ದೇವತೆ ಪರರಿಗೀಯುವಡೆ ವರವಾ। ಎನುವಗಾದೆಯುನೊಂದ ಕಂಡೆ ನಿಂದಾನು। ಜನಪ ಮಾಗಧಗಂಜಿ ಊರ ಬಿಟ್ಟೀನೂ ॥೩॥ ಘನ ವೈಪಸೀನೆಂದು ಮರುಳಾಗಿ ನೃಪರೂ। ನಿನಗೆ ದೂರಿಪರವರು ಯಂತುಪಾರ ಹರೋ। ಜನಪರರಿಯುತು ನಿನ್ನ ಮಹಿಮೆಗಳೆನಗೆ। ಮನನವಾಗಿಹುದೆಂದು ನುಡಿದಳ್ ವಲ್ಲಭಗೆ ॥೪॥ ಅರಸಿ ಲಾಲಿಸು ನಿನ್ನ ಹಾಸ್ಯವಂತಿರಲಿ। ಮರುತನಂದನನಿಂದ ಅವನ ಯುದ್ಧದಲಿ ॥ ತರಿಸಿ ಕಾರದೊಳಿರ್ದ ಧರಣಿ ಪಾಲರನೂ। ಪೊರೆದು ಪಾಂಡವರ ಮುಖವನ್ನು ಸಾಗಿಪೆನೂ ॥೫॥

ಭಾಮಿನಿ:— ವನಿತೆಗಿಂತೊರೆದಚ್ಯುತನು ಮರು। ದಿನದೊಳಾ ಪಾಂಡವರ ನಗರಕೆ। ಘನತವಕದಿಂ ಬಂದನೆಂತ್ರೋ ಭಜಿಪರೊಳು ಮಮತೆ ॥ ಇನಜ ಸುತಗಿದನ್ನೈದಿ ಚಾರಕ। ಜನರೊರೆಯೆ ಸಂತೋಷದಿಂತ। ನ್ನನುಜ ಬಾಂಧವ ಜನರು ಸಹಿತಿದಿರಾಗಿ ನಡೆತಂದಾ ॥ **ವಾರ್ಧಿಕ:—** ಕಮಲದಳ ನೇತ್ರನಂ ಜಲಜನಿಭಗಾತ್ರನಂ ಸುಮಬಾಣತಾತನಂ ಮೂಲೋಕತಾತನಂ। ತಮದೈತ್ಯ ನಿಷ್ಕಂಠಸಂಹರಮಸಂಕಸನಂ ಲಕ್ಷ್ಮೀಮನೋಹರನನೂ॥ ಕಮಲದಳ ಮಿತ್ರನಂ। ಕಮಲನಿಭ ವಕ್ತ್ರನಂ। ಕಮಲಬಂಜ ರೂಪನಂ ಕುಮತಿ ಹೃತ್ತಾಪನಂ। ಅಮರೇಂದ್ರ ಪಾಲನಂ ದೈತ್ಯಕುಲಕಾಲನಂ ಭೂಪನಿದಿರ್ಗೊಂಡನೂ ॥

(ರಾಗ ಸಾರಂಗ | ಅಷ್ಟತಾಳ)

ಇದಿರಾಗಿ ಬರುವ ಮಾಧವನನ್ನು || ಕಂಡು ಮುದದಿಂದ ಧರ್ಮ ಕುಮಾರನೂ || ಅಧಿಕ ಭಕ್ತಿಯಲಿ ವಂದಿಸೆ ಕಂಡು ಬಂದು | ಮಧುವೈರಿ ತಕ್ಕವಿಸಿದನಂದೂ ||೧|| ಚರಣಕ್ಕೆ ಮಣಿದ ಭೀಮಾದ್ಯರಾ ಅಪ್ಪಿ | ಮುರವೈರಿ ಬಳಿಕ ಭಾವಂದಿರಾ| ಕರವ ಪಿಡಿದು ಪೊಕ್ಕ ಸಭೆಯನ್ನು| ದಿವ್ಯ ಹರಿಪೀಠವಲಿ ಕುಳಿತೆಂದನೂ ||೨|| ಧರಣೀಶ ಕೇಳೆಂದು ನನ್ನನೂ ನೀನು ಕರಸಿದ ಮೂಲಕಾರಣವೇನು || ಕುರುಸೇನೆಯಲಿ ದಾನವರೊಳು ಭೀತಿ | ದೊರಕಿತೆ ಎನಲೆಂದ ಹರಿಯೊಳೂ ||೩|| ನೀ ತಿಳಿಯುವ ಮರ್ತ್ಯನೆಂತಿದೂ | ಕೇಳ್ವುದ್ಯಾತಕೆ ನಾರದ ಮುನಿ ಬಂದೂ || ತಾತಗೆ ದಿವದೊಳಿಂಬಿಲ್ಲೆಂದೂ | ಪೇಳ್ದ ಭೂತಳಾಧಿಪಯಾಗ ಗೈ ಎಂದೂ ||೪|| ಮನದೊಳದಕೆ ರಾಜಸೂಯವಾ | ಮಾಳ್ಪೆನೆನುತ ಮಾಡಿದೆನು ಸಂಕಲ್ಪವಾ / ಎನಗೆ ನಿಮ್ಮಭಿಮತವಂದವಾ| ಪೇಳಿ ಎನಲೆಂದನಾಗ ರಮಾಧವಾ ||೫||

(ರಾಗ ಕಲ್ಯಾಣಿ ಅಷ್ಟ ತಾಳ)

ವನಜಾರಿ ಕುಲರತ್ನಕೇಳೂ| ದೇವ ಮುನಿಪ ನಾರದನ ಮಾತಿನೊಳೂ || ಮನುಜೇಶಯಾಗವಮಾಡುವೆನೆನೆ ಸರ್ವ || ಜನಪರೊಪ್ಪುವರೆ ನಿನಗ್ಯಾಕೆ ಮುಖದಾಶೆ ||೧|| ಪರರ ಮಾತಂತಿರಲಿಂದೂ | ನಿಮ್ಮವರು ನಿಮ್ಮ ಸಿರಿಯನ್ನೆ ಕಂಡೂ|| ಹರುಷಗೊಂಬರೆ ಮಾಗಧನ ಮನೆಯೊಳಗತ್ತ | ದುರಳ ಕೌಂಸನ ಕೆಟ್ಟ ಪರಿವಾರವೀರ್ಪುದು ||೨|| ವೀರಮಾಗಧ ಶಿಶುಪಾಲಾ | ಮತ್ತೆ ಧಾರುಣಿ ಪುತ್ರನ ಬಾಲಾ || ಘೋರವಿಕ್ರಮಸಾಲ್ವ ಮುಂತಾದ ಭೂಮಿಪ | ಪರಿವಾರಯಜ್ಞಕೆ ಮುನಿಯದಿರ್ಪರೆ ಪೇಳು ||೩|| ವಿಗಡರಾದೆಲ್ಲರಸರೊಳು | ಚೈದ್ಯ ಮಾಗಧರಿರ್ಪರೆ ಸಾಹಸಿಗಳು||ಪಗೆಗಳಿಬ್ಬರೆ ನಮ್ಮ ಮುಖಕೆ ಮಿಕ್ಕವರೆಲ್ಲ| ಹಗರಣ ಮಾಡಿಪರಂಜಿಕೆ ನಮ

ಗಿಲ್ಲಾ ||೪|| ಅವರಿಬ್ಬರೊಳಗೆ ಮಾಗಧನೂ ವೀರ | ನವನ ಗೆಲ್ಲುವ ಸಾಹಸಿಗಳನು || ಅವನಿಯೊಳ್ಕಾಣೆ ಮಧುರೆಯು ಬಿಟ್ಟುನಾ| ವವನ ಭೀತಿಯೊಳ್ನೈದೆವಬ್ಧಿಯೊಳ್ಭವನವಾ ||೫|| ಕೊಂದೆವು ನಾವು ಕಂಸನನೂ ಅತ | ನಿಂದು ಮುಖಿಯರು ಹುಯ್ಯಲನೂ||ತಂದೆಗೊರೆಯೆ ಮಧುರೆಯ ಮೇಲೆ ದಂಡೆತ್ತಿ| ಬಂದೆವ್ಮ ಗೆಲ್ದನು ಹದಿನೆಂಟನೆಯ ಬಾರಿ ||೬|| ಅನುಚರರ್ನಾವ್ನಿಮಗೆಂದೂ ಅತ| ಮುನಿಯದೆ ಬಿಡನವನಿಂದೂ | ಇನಜಜನ ಪುರವನಿತ್ತ್ರನಕ ಸಾಗದುಯಜ್ಞ | ಘನಸಾಹಸಿಗಳ ಕಾಣೆನು ನಮ್ಮಲ್ಲೀ ||೭||

ಭಾಮಿನಿ:— ಇನಿತು ಘನವೇ ಕೃಷ್ಣಯಾಗಕೆ| ಜನಪರುಪಟಳ ನಿನ್ನ ಕೈಯ್ಯಲೀ | ದನುಜರಗಜಿತ ಮಡಿದರೀ ಮಾಗಧ ನೃಪಾಲಕರೂ || ನಿನಗೆ ಮಣಿಯರೆ ಶಿವ ಮಹಾದೇ | ವೆನಗೆ ನೃಪಮುಖದಾಶೆಯಾಕೆನೆ ಇನಜಸುತ ನಡಿವಾವರೆಗೆ ಮಣಿದೆಂದನಾ ಭೀಮಾ ||೧||

(ರಾಗ ಮಾರವಿ | ಏಕತಾಳ)

ಪೊಡವಿಪ ಕೇಳ್ತ್ರವ ಸಂಕಲ್ಪಂಗಳ ಕೆಡಿಸುವರಾರ್ಜಗದೀ || ಕೊಡು ನೇಮವ ನಿನಗಹಿತನ ಮಗಧನ ಕೆಡಹುವೆನೀಕ್ಷಣದೀ ||೧|| ನರಹರಿ ಪಾದಾಂಬುಜದಯ ನಿನ್ನಲಿ ಪಿರಿದಾಗಿರಲಿಂದೂ || ಧರಣೀಶರು ಮುನಿದೆಸಗುವರೇಂ ಮುರಹರ ನಸುನಗುತಂದು ||೨|| ಉಸುರಿದ ನೆಲೆ ಮರುತಜ ಕೇಳ್ಮಾಗಧ ವಸುಧೇಶನ ನೀನೂ|| ಅಸುಗೊಂಡರೆ ಮಿಕ್ಕವರ್ಧಾರ್ಗೆಲ್ಲುವರುಸುರಿಸೆ ಫಲುಗುಣನೂ ||೩|| ಒರೆವನು ಮಾಧವ ಕೇಳ್ತ್ರವ ದಯವಿರೆ| ತರಿಸುವೆನಸುರನೂ || ನೆರಪುವೆ ಪಿತ್ರವನಧ್ವರಕೆಂದನು | ತಿರುಗಿ ಮುರಾಂತಕನೂ ||೪|| ನುಡಿವನು ಧರ್ಮಜ ಲಾಲಿಸು ಮಾಗಧ| ರೊಡೆಯಗೆ ಪವನಜಗೇ ಪಡಿಯುಪ್ಪುದು ಬಲಗೆಲ್ಲುವನಾತನ | ಕೊಡು ವೀಳ್ಯವನಿವಗೆ ||೫|| ಬಹುಜಗ ಭೂಮಿಪರಾತನ | ಕಾರದೊಳಿಹರವರೆಲ್ಲರನೂ || ಮಹಿಲದಿ ಬಿಡಿ

ಸಲು ಕರಸಹಯುಜ್ಞಕೆ | ಬಹರೆನೆ ಧರ್ಮಜನೂ ||೬|| **ಭಾಮಿನಿ:—**
ಕನಕಪಾತ್ರೆಯೊಳಿತ್ತು ವೀಳ್ಯವ | ನನಿಲಜಗೆ ಹರಿದಯದಿ ಮಾಗಧ |
ಜನಪನನು ಜೈಸೆನುತ ಮಧುಸೂಧನನಹಸ್ತದಲಿ||ಅನುಜರನು ಕೊಟ್ಟಿವ್ಮ
ರಕ್ಷಿಪು| ದೆನುತ ಸೇನೆಯ ನೆರಪಿ ಮುರ ಮರ್ದನಗೆ| ಸೇನಾಧಿಪತ್ಯವಗಟ್ಟಿ
ಬೀಳ್ಗೊಟ್ಟಾ ||೧|| ಭೂಪ ಕೇಳ್ಳೆ ಬಳಿಕ ಮಾಗಧ | ಭೂಪ
ಯೌವನವಂತನಾಗಿ ಶಿ| ವಾಪತಿಯ ತಪದಿಂದ ಮೆಚ್ಚಿಸಿ ಪಡೆದು ಮೂವ
ರವಾ || ದ್ವೀಪಸಪ್ತಕದೊಳಗೆ ಮಲೆತ ಮ| ಹೀಪತಿಗಳನು ತಂದು ಬಂಧಿಸಿ|
ಆ ಪರಾಕ್ರಮಿ ಸುಖದಿ ರಾಜ್ಯವನಾಳುತಿಸೆದಿರ್ದಾ ||೨|| ಕಾಲಜಾತನ
ಬೀಳುಗೊಂಡಾ | ಕಾಲನೇಮಿ ವಿರೋಧಿ ಬಲ ಸಹ | ಭಾಲಲೋಚನ ವರದಿ
ಬಳ್ಲಿದ ಮಾಗಧೇಶ್ವರನಾ || ಶೀಲ ರಾಜ್ಯವ ಪೊಕ್ಕು ಸೇನಾಪಾಲವನು
ಪಿಂದುಳಿಸಿ ಮಗಧನ| ಮೂಲಬಲವೆಂದೆನಿಪ ಭೇರಿಗಳಿರುವ ಗಿರಿಗಡರ್ದಾ ||೩||

(ರಾಗ ಶಂಕರಾ ಭರಣ | ತಾಳ ತ್ರಿವಿಡೆ)

ಅರಸ ಕೇಳ್ಬರಿ ಪಾರ್ಥ ಭೀಮರು | ಗಿರಿಯನೇರುತ್ತಿದಿರಲಿ || ಅರಿ
ಭಯಂಕರ ಭೇರಿಗಳು ಮೂ| ರಿರಲು ಕಂಡರು ಸನಿಹದೀ ||೧|| ಜವ
ನೀರಿಕ್ಷಿಸಿ ಪಾರ್ಥ ಕೇಳಿವ| ಮವನಪಿತ ಕೇಳಿವುಗಳೂ || ಅಮಭೂತದ
ದುಂದುಭಿಗಳೆಂತಿವ | ಗೊದಗಿದವು ಪೇಳೆಂದನೂ ||೨|| ಹರಿಸುಡಿದ
ನರಕೇಳು ಪೂರ್ವದಿ| ಕೊರಳು ಮೂರರ ಮಾಘನೂ|| ಸುರರ ಬಾಧಿಸಲವನ
ಮರ್ಧಿಸೆ|| ಪರಮ ಶಿವನೈತಂದನೂ ||೩|| ಶೂಲದಿಂದಾ ಖಳನ ಕಂಠದ |
ನಾಳವನು ಕತ್ತರಿಸಲೂ || ಕಾಳನಂದದೊಳವನನುಜ ವೃಷ || ಶೂಲಧರಗಿದಿ
ರಾಗಲೂ ||೪|| ಮೆಟ್ಟಿ ಚರ್ಮವ ಸೀಳಿಯವನೊಡ| ಹುಟ್ಟಿದವ
ಮುಕ್ಕೊರಳೊಳೂ || ಕಟ್ಟಿ ಭೇರಿಯ ಮಾಡಿ ಪರಶಿವ| ತಟ್ಟಿದನು
ಸಂಭ್ರಮದೊಳೂ ||೫||

ಭಾಮಿನಿ:— ಎಲೆ ಧನಂಜಯ ಕೇಳು ರುದ್ರನ | ವಲಿಸಿ ಪ ಪಡೆವನಾತಗೆ| ಮಲತ ವೈರಿಗಳವರ ಶಬ್ದವ ಕೇಳಲೋಡುವರು|| ಗೆಲಿದ...ನ ವರಿಂದರಿಪುಗಳ | ನೆಲಕಿದರ ಪಡದಿಡುವವನ್ನಕ | ಸಲೆಭಯಂಕರವಾಗದಪ ಜಯವಾಗದವಗೆಂದಾ ||೧|| ಹರಿಯ ಮಾತನು ಕೇಳಿ ಫಲುಗುಣ | ಮರುತಜರು ಭೇರಿಗಳ ಬಡಿವೆಳೆ| ಗೊರಗಿಸಿದರಾಧ್ವನಿಗೆ|ನಡುಗಿತು ಲೋಕ ಮಾಗಘನಾ || ಕರಣ ಕಳವಳಿಸಿದುದು ತೋರಿತು | ಪುರದಿ ಬಹಳುತ್ಪಾತ ವಿಪ್ರರ| ಕರಸಿ ಬೆಸಗೊಳೆ ಮಾಡು ಶಾಂತಿಯನೆಂದರವನಿಪಗೇ ||೨||

(ರಾಗ ಭೈರವಿ| ಏಕತಾಳ)

ಬುಧಜನರಿಂತೆನೆ ಕೇಳ್ದು | ಮಾ | ಗಧನುರೆ ಮುದವನು ತಾಳ್ದು || ವಿಧಿಸುವೆ ಘನಶಾಂತಿಯನೂ | ಬಹು | ಮುದಯುದೊಳೆನುತಲ್ಲರನೂ || ೧ || ನೃಹಕಟ್ಟಿದ ನಿಶಿ ಕಳಿಯೆ | ಆ| ಮಿಹಿರನು ಮುದದಿಂ ಸುಳಿಯೇ || ವಹಿಲದಿ ಸಭೆಯೊಳು ನೃಪನೂ | ತಾ | ಬಹುಜನ ಸಹಿ ತೊಪ್ಪಿದನೂ || ೨ || ಹರಿ ಭೀಮಾರ್ಜುನರಿತ್ತಾ | ನಿಜ ಪರಿವಾರವ ನಗಲುತ್ತಾ || ಧರೆಯಮರರ ವೇಷ ವನೂ | ಮೂ | ವರು ಧರಿಸುತ ಬರೆ ಮಾಗಧನೂ || ೩ || ಪರಿಜನ ಸಹಿತೊಪ್ಪಿರುವಾ | ಸಭೆ | ಗುರುವಣಿಸಲು ನಡೆತರುವ | ಧರೆಯಮರರ ಕಂಡೆದ್ದೂ | ನೆರೆ | ಧರಿಜೆಪನೊಂದನೆಗೈದು || ೪ || ನಸುನಗುತಿವರ್ಗಳ ಸುಭವಾ | ತಾ | ಬೆಸಗೊಂಡೀಕ್ಷಿಸುತಿರವಾ || ವಸುಧಾಮರರಲ್ಲೆಂದೂ| ಚಿಂ| ತಿಸಿದನು ಮನದೊಳಗಂದೂ || ೫ ||

(ರಾಗ ಸೌರಾಷ್ಟ್ರ ತಾಳ ತ್ರಿವಿಡೆ)

ಹರಹರೇನಾಶ್ಚರ್ಯ ಪೇಳುವೂ | ಪರುಧರಾಮರರಲ್ಲವೆಮ್ಮೊಳು ||ಧುರವ ಬಯಸಿಯೆ ಬಂದ ಭೂಪರು | ಪರಿಕಿಸುವಡೇ ||೧|| ಈಗ ಬಿಡುಕಲ್ಲ ವರು ಮುಪಿಯಲಿ | ನಾಗಪುರದರಸುಗಳು ನಿಶ್ಚಯ || ರಾಗಿಪರು ಖಳನಲ್ಲ ಧರ್ಮಜ | ಮೇಗೆ ಜಗದೀ ||೨|| ಸಾಗರೋಪಾಂತದ ನರೇಂದ್ರರು | ಭೋಗಿಸಿದ ಮುತ್ತುಗಳು ಭಾಪಿಸ || ಲೀ ಗವಾಳರ ಬರವಿಚಿತ್ರವಿ | ದೀಗ ಳೆಂದಾ ||೩|| ಯಾದವರು ಹಿಂದೆಮ್ಮೊಡನೆ ಹಗೆ |ಯಾದವರು ಮತ್ತಾವ ರೊಳಗೆ ಶ್ರಮ | ಗಾವವನ ಮಾತೇನು ಮುಕ್ತಿನ ಭೂಮಿಪರೊಳೂ ||೪||

ಎನಗೆ ಮಲಿತವರಾರು ಎಂದಾ । ಜನಪ ಯೋಚಿಸಿ ಬಳಿಕ ಕೃಷ್ಣಾ|ರ್ಜುನ ವೃಕೋದರರುಗಳ ಕೇಳ್ದನು । ವಿನಯದಿಂದಾ ||

[ರಾಗ ಕೇದಾರಗೌಳ ಅಷ್ಟತಾಳ]

ಧರಣಿಯಮರ ವೇಷದಿಂದ ನೀವೇಕೆನ್ನ । ಪುರಕೆ ಬಂದಿರಿಯಂದನೂ ತ್ವರಿತದೊಳುಸುರಿ ಸತ್ಪುರುಷರಾದವರಿಗೆ । ಧರವೇ ಕಪಟವೆಂದನೂ || ೧ ||
ಜನಪರುಕಪಟದೊಳಲ್ಲದೆ ರಿಪುಗಳ । ಮನೆಯನ್ನು ಪೋಗುವರೇನೊ । ಮನುಜೇಶ ರಿಪುಸಂಗರಕಾಗಿಬಂದೆವೆಂ । ದನು ದೈತ್ಯಕುಲ ನಾಶನೂ
ಶಿವ ಶಿವ ನಿಮಗೆ ನಾವ್‌ರಿಪುಗಳೆ ನಮ್ಮಯ । ಭವನ ವೈರಿಯು ಗೃಹವೇ। ನಿಮಗೆಮಗೇನು ಕಾರಣ ವೈರಬಂತೆನೆ । ದಿವಿಜ ವಂದಿತ ನವಗೇ || ೨ ||
ನುಡಿದನು ಹಲವರಿಳಾಧಿಪರನು ನೀನು । ಕೂಡಿರ್ಪೆ ಕಾರದೊಳು || ಬಿಡು ಭಂಡತನ ಬೇಡವವರ ಹುಯ್ಯಲ ಕೇಳಿ । ಬಿಡಿಸಲಾವ್ಬೈತಂದೆವು || ೩ ||
ಆ ನೃಪಾಲರಿಗೆ ನೀ ವೊಮ್ಮನೋ ಮಿತ್ರನೋ। ಸೂನುವೊ ಶ್ಯಾಲಕನೋ || ನಾನವರನ್ನು ಬಂಧಿಸಲೊಡಲುರಿ ನಿನ । ಗೇನಾ ಪೇಳೆನಲೆಂದನೂ || ೪ ||
ಮಲತವರನು ಕೊಂದು ಮರೆಯ ಹೊಕ್ಕವರನ್ನು । ಸಲಹಿದು ಪ್ಪಾತ್ರನೂ|| ತಲೆಗೊಂಡಾ ಧರ್ಮವ ನಿಲಿಪುವೆಮ್ಮಯ ಕಾರ್ಯ ಕೇಳಿಯ ಟೇಡನೆಂ ದನು || ೫ || **ಭಾಮಿನಿ:—** ಶಿವಶಿವಾ ನೀವ್ ಶೀಕ್ಷ್ಣರಕ್ಷಾ । ಸವನ ದೀಕ್ಷಿತರೇ ಧಾತ್ರೀಶವರ ಹುಯ್ಯಲ ಕೇಳಿ ಬಿಡಿಸಲು ಬಂದಿರೇ ಅವರ || ಅವನಿಯೊಳಗಚ್ಚರಿಯನಿಂದಿನ । ದಿವಸ ಕಂಡೆನು ನಿಮ್ಮ ನಿಜವನು ವಿವಂಸಲ್ ಜತಂದ ಭಂಡತನನಳೇಕೆಂದಾ || ೧ ||

[ರಾಗ ಕೇದಾರ ಗೌಳ ತಾಳ ಝಂಪೆ]

ದಿವಿಜ ವಂದಿತ ದೇವನೂ || ಬಳಿಕೆಂದ ನಮಗೆ ನಾನಸುರ ಹರನೂ ಪವನಸುತ ನಿವನೀತನೂ । ಪಾರ್ಥ ಕೊಡು ನಮಗೊಬ್ಬರೊಳುಘರ ವನೂ || ೧ || ಎನಲಚ್ಯುತನ ವಾತನೂ। ಕೇಳುತ್ತಾ ಜನಪ ಬೆರಗಾಗಿ ತಾನೂ || ಘನ ನಗೆಯ ಕಡಲಿನೊಳಗೇ । ಬಿದ್ದೆದ್ದು ತೊನೆದೆಂದ ತನ್ನವ ರಿಗೆ || ೨ || ಈತನಾರೆಂದರಿವಿರೈ । ಜಗದಿ ನಮ್ಮಾತನೀತನು ಕಾಣಿರೈ । ಷ್ಟತ ಸಂಪುಗಳಿಯನೂ । ಅದರಿಂದ ನಮಗೆ ವೊಮ್ಮಗನಾವನೂ || ೩ ||

ಇವನ ಕುಲವನು ಬಲ್ಲಿರೈ | ನೀವೆಲ್ಲ ಇವನ ಶೀಲವನರಿಯಿರೈ || ಇವನು
ಗೋಮಂತ ನಗರದೀ | ಓಡುಳಿದ ಬವರನಲಿ ಹಿಂದೆ ಘುರದೀ || ೪ ||
ಎಂದು ತನ್ನವರಿಗೊರೆದು | ಮಗಧ ನೃಪನಂದು ಘನ ಶೌರ್ಯವೆರದೂ ||
ನಂದ ನಂದನನ ನೋಡಿ | ಜರೆಯುತ್ತಲಿಂತೆದ ರೋಷತಾಳೀ || ೫ ||

[ರಾಗ ಕಾಂಬೋಧಿ ಝುಂಪೆ ತಾಳ]

ಎಲವೊ ಗೋಪಾಲಕ ಕೇಳು ಸಂಗರಕೆ | ಮಲತಲ್ಪರಾದ ಭೂಮಿ
ಪರಾ || ತಲೆಗೊಂಡೆನೆಂಬ ಸಾಹಸದಿಂದಲೆನೆಗಿಂದು | ಮಲತೆ ಶಾಭಾಸುಮಜ
ವೀರಾ || ೧ || ಕರಿಯುಮರಿ ಸಿಂಹಗಿದಿರಾಗಿ ಜೀವಿಪುದುಂಟೇ | ಹುಲಿಯು
ಮರಿ ಉರವಣಿಯ ಹರಿಣವಾಗುವದೇ || ಸರಿಯೇ ನೀ ಎನಗೆ ಮದಸೊಕ್ಕಿಂದ
ಬಂದೆನ್ನ | ಕೆರಳಿಸಿಯೆ ಕೆಟ್ಟೆನೀ ಬರಿದೇ || ೨ || ವೀರರಂಗಾ ಭರಜ
ವಾಪ್ರುದಾತ್ಮಸ್ತುತಿಯೊಳ್ | ಕೂರಲಗಿನಾರ್ಭಟೆಯೊ ನೀನು || ಭಾರಿ
ಬಲನಾದರಂಜದೆ ಯುದ್ಧಕೇಳಿಂದು | ಮಾರಪಿತನೃಪಗೆ ಪೇಳಿದನು ||೩||
ದನಗಾಹಿ ಕೇಳ್ಕಂಸನರಸಿಯರ ದುಃಖ ಶಿಖಿ | ಯನು ನಿನ್ನ ರಕ್ತತೋಯಂ
ದಲಿ || ನೆನಸಿ ಕಂಸಾದಿಗಳ ಹರಿಬವನು ಗೆಲ್ದು | ಗೆಳೆತನವ ನೆಸಗುವೆನು
ದನುಜರಲೀ ||೪|| ಗೋವಳರು ಮಾನಯುತರಲ್ಲವನ ಮಾತಿರಲಿ | ನೀವೀ
ರ್ವರು ರಾಜಸುತರೂ || ಸಾವ ಬಯಸುವನೊಡನೆ ಬಂದು ಕೆಟ್ಟಿರಿ ಎಂದ
ದೇವಪತಿಜಾತ ಭೀಮರೊಳೂ ||೫|| ಬಲಯುಕ್ತರಾದವರು ಗಳಪುವರೆ
ಭುಜದಿ ಘನ | ಬಲವಿರಲು ತೋರಿಸುವದೆಮಗೇ || ಜಲಜಾಕ್ಷ ಗೋವಳಗೇ
ನೀನುತ್ತ ಮನೆ ಎಂದು | ಫಲಗುಣನು ಜರೆದ ಖತಿಮಿನುಗೇ ||೬||

(ರಾಗ ಭೈರವಿ ಅಷ್ಟತಾಳ)

ನರನೆಂದ ವಾಕ್ಯವನ್ನು | ಕೇಳುತ್ತಲಾ | ಧುರಧೀರ ಮಾಗಧನೂ ||
ಧರಜೆಯು ಕವಲಿಪ ಶಕ್ತ ರಾಮನನೆಲ್ದಿ | ಸರಿಯೆ ಮಿಕ್ಕವರೆಂದನೂ ||೧||
ಮಗಧ ಕೇಳ್ ರಾಮನನೂ | ಗೆಲ್ದರೆಮಿಕ್ಕ | ವಿಗಡ ಭೀಮಾದ್ಯರನ್ನು |
ಜಗಳದಿ ಜಯಿಸುವ ವೀರನಾದೆಯ ಎಂದು ನಗಧರ ಗಜರಿದನೂ || ೨ ||
ತುರುಗಾಹಿ ಕೇಳೊ ನಾನು | ಗರ್ವದಿ ನಿಮ್ಮ | ಜರೆದು ಫಲಂಗಳೇನು || ಬರಿಕ
ಕಾನುವ ಸತ್ವವಿರೆ ನಿಲ್ಲಿ ದೂವರ | ತರುಬುವೆನೊಬ್ಬ ನಾನು || ೩ ||
ದುರುಳ ಕೇಳ್ ಮೂವರನೂ | ಭಂಗಿಪೆನೆಂದು | ಬಿನುಗಿದೆ ಮುದದಿ ನೀನು ||

ಇರಲಿ ಆ ಮಾತೆಮ್ಮೊಳೊಬ್ಬನ ಗೆಲ್ದರೆ| ಅರಿವೆ ಸಾಹಸವೆಂದನು ||೪|| ಓಟಕ್ಕೆ ವೀರ ನೀನು ಕೇಳ್ನಿನ್ನ| ಕಾದಾಟಕ್ಕೆ ಜಗದಿ ನಾನು || ಸಾಟಿಯುಲ್ಲದರಿಂದ ಇಂದು ನಿನ್ನೊಡನೆ ಹೊಯ್ದಾಟಕಾನಂಜುವೆನು ||೫|| ನರನೀತ ಬಾಲಕನು| ಸಂಗರಕೆನ್ನ|ಸರಿಯೊಬ್ಬನೀ ಭೀಮನು|| ಧುರಧೀರನಾಗಾಯುತ ಬಲನೀತಂಗೆ| ಧುರವನಿತ್ತಪೆನೆಂದನು ||೬|| **ಭಾಮಿನಿ—** ಇಂತೊರೆದು ಮಾಗಧ ಮಹೀಪತಿ| ಸಂತಸದಿ ಹರಿಭೀಮಪಾರ್ಥರ| ಮುಂದೆ ವಸ್ತ್ರಾಭರಣಗಳ ತಂದಿರಿಸಿ ಸಂಗರಕೇ| ತಾ ತನುವ ಶೃಂಗರಿಸಿ ಪವನಜ| ನಂತಿಕಕೆ ನೆರೆ ಸಾರೆ ಮರುತಜ| ಕಂತುಪಿತನಡಿಗೆರಗಿ ಅವಗಿದಿರಾಗಿ ನಡೆತಂದಾ ||೧||

[ರಾಗ ಭೋಗಷಟ್ಪದಿ| ತಾಳಮುಟ್ಟೆ]

ಧರಣಿಪಾಲ ಕೇಳು ನಿನಗೆ| ಧುರದಿ ಚಾಪ ಬಾಣ ಖಡ್ಗ| ಪರಶು ಮುಖ್ಯ ಕೈದುವಿನಲಿ ಧುರಪರಿಶ್ರಮ| ತರುಬು ಯುದ್ಧದೊಳಗೆ ಸತ್ವ| ದಿರವನೋಳ್ಪುದೆಂದು ವಾಯು| ತರಳನುಡಿಯೆ ಮಾಗಧೇಂದ್ರ ನಗುತಲಿಂದನು ||೧|| ಮರುತತನಯ ನಮ್ಮಧುರವ| ನರಿಯದಿವನ ಮಾತ ಕೇಳಿ| ಬರಲು ಬಹುದೇ ಮಿತ್ರರಾಗಿ ಮರುಳತನವಲೀ|| ಕರದು ತಂದ ಕೃಷ್ಣನಿರವ| ನರಿಯದಾದಿರಲ್ಲಾ ನೀವು| ಕರುಳ ಬಗೆದು ಬಲಿಯ ಕೊಡುವೆ| ಮರುಳ ಬಳಗಕೇ ||೨|| ಖೂಳ ಕೇಳು ಬರಿದೆ ಶ್ರೀ ಲೋಲನೊಳು ವಿರೋಧಿ ತನದಿ| ಬಾಳಿದವರ ತೋರ್ಪುದೀರೇಳು ಭುವನದೀ|| ಲೋಲನೇತ್ರ ಕರುಣದಿಂದ| ಪಾಲಿಸುವರ ಕೊಲುವಮಂಟಿ| ತಾಳುವವೆ ಪತಂಗ ದೀಪದೊಡನೆ ಸಜೆಯುಲೂ ||೩|| ಮಾರುತಾತ್ಮ ಭವನೆ ಮೂ| ದಾರು ಬಾರಿ ಧುರದಿ ಸೋತು| ದಾರಿವೆಗೆದು ಪುರವಗೈದ ವಾರಿನಿಧಿಯೊಳೂ || ಚೋರನೆಂದ ಮಾತಕೇಳಿ ವೀರತನವನರಿಯದೆನ್ನ| ಹೋರಲೆನುತ ಬಂದಿರಲ್ಲ ಪೋರರೀರ್ವರು ||೪|| ಎಲವೊ ಮಗಧ ಕೇಳು ನಿನ್ನ| ಬಲವ ಕೇಳಿ ಬಂದೆವೈಸೆ| ನಿಲುನಿಲಾದಡೆನುತ ಭೀಮ ಮುಳಿದು ತಿವಿದನೂ|| ಅನಿಲ ಜಾತ ಕೇಳು ಜಗದೊ| ಳೆನಗೆ ನಿನಗೆ ಸಮಬಲಂಗ| ಳೆನುತ ಜನರು ಪೇಳ್ವರದುವೆ ಹುಸಿಯೋ ಸತ್ಯವೋ|| ಎನುವದಿಂದು ಕಾಣಬೇಕು| ಧನುಶರಾದಿಕೈದು ವ್ಯಾಕೆ| ಘನ ನಿಯುದ್ಧ ಕಾಸೆನುತ್ತ ಮಲತ ಭೀಮಗೆ ||೫|| ಬಳಕ

ರೋರ್ವರೋರ್ವರನ್ನು | ಪಳಿದು ಕೊಳುತ ಕಾದುತಿರ್ದ | ರುಳಿದರೆಲ್ಲ ಧುರವ ನೋಡುತೀರ್ದರು || ಸುಳಿದ ಸಿಡಿಲ ಶಬ್ದವನ್ನು | ಪಳಿದು ದಿವರ ಮುಷ್ಟಿಘಾತ | ವಳಿಯುವಧಟಿಸುತಸುರಾಳಿ | ಪೊಗಳ್ದುದುಭಯರ || ೬ ||

ಭಾಮಿನಿ:— ಈ ತೆರದಿ ಹದಿನಾಲ್ಕು ದಿನ ಭೂನಾಥ ಭೀಮರು ಬಿಡದೆ ಹಳಚಲು | ಘಾತುಗೆಟ್ಟನು ಮಗಧನವನಸುರಾಂತಕನು ತಿಳಿದೂ || ವಾತಜನೊಳಿಂತೆಂದ ನಿನ್ನಯ | ತಾತನನು ಭಜಿಸವನ ಬಲದಿಂ | ದೀತನನು ಜೈಸೆಂದಲು ಮಾರುತಿಧ್ಯಾನಪರನಾದಾ ||೧||

ವಾರ್ಧಿಕ್ಯ:— ಅನಿಲಜಂ ಪಿತನೊಲುಮೆವೆತ್ತು ಮಗಧೇಂದ್ರನಂ | ಘನಕೋಪದಿಂ ತುಡುಕಿ ಪಿಡಿದು ಕಾಲ್ಗಳ ಮೆಟ್ಟಿ ಅನಿಲಜಂ ಪೂರ್ವದಿ ಮಹೋದರನ ಸೀಳ್ದಂತೆ ಸಿಗಿದು ಬಿಸುಡಿಲ್ಕವನನೂ || ಜನರೆಲ್ಲ ನೋಡಿ ಹಾಹಾರವದಿ ಘೋಳಿಡಲ್ | ಅನಿಲಜಂ ಬಂದು ಕೃಷ್ಣಂಗೆರಗೆ ಮಾಧವಂ|ವಿನಯದಿಂದೆತ್ತಲನಿತರೊಳವನ ಸೋಲಂ ಬೆಚ್ಚರೆ ಮಲತು ಜರೆದೆಂದನು || ೧ ||

(ರಾಗ ಭೈರವಿ ಏಕ ತಾಳ)

ಅನಿಲಜ ಕೇಳ್ಪುರಹರನ | ವರ | ವೆನಗಿದೆ ಮೋಣ್ ಕುಂತಿಕಜನ || ಘನದಯೆಯಿಂ ಯುತನಾದ | ಯ | ನ್ನನು ಜಯಿಸುವರಾರೀಗ ||೧|| ಎನುತವ ಮುಷ್ಟಿಯೊಳಿರಗೇ | ಮಗುಳನಿಲಜ ಸೀಳುಂತಲಿಳೆಗೆ || ಘನವೇಗ ಮೊಳೀಡಾಡೆ | ಗುಹ | ಜನಕನ ವರದಿಂ ಕೂಡೆ ||೨|| ಸಂಧಿಸಿ ಸೀಳ್ಮಾಗಧನೂ | ಮುಳಿದೆಂದನು ಭೀಮಗೆ ತಾನೂ || ಹಿಂದಣ ಬಕ ದುಂತಾದ | ಏಳ | ದಂದಪೆನುತ್ತಿದಿರಾದ ||೩|| ಅರಿಯಲು ಬಹು ನಿಂದೆನುತ | ನೃಪ | ಜರಿಯಲು ಮಾರುತ ಜಾತ | ಬೆರಗಾಗುತ ಮನದೊಳಗೇ | ಹರನೆರಗಿದ ನಾಬಳನೆಡೆಗೇ ||೪|| ಗುದ್ದಿದ ನವನೀತನನೂ | ಸಮ | ರೋದ್ವೃತ ಪವನಾತ್ಮಜನೂ || ಹದ್ದುಹಿಸಿರುವ ತೆರದಿ | ಧರೆಗೊದ್ದುರುಳಿಸಿದನು ಭರದೀ ||೫||

ವಾರ್ಧಿಕ:— ಉತ್ತರಾಸುತಪುತ್ರ ಕೇಳ್ ಶರ್ವವರದಿಂದ | ಮತ್ತೆ ಸೀಳ್ಪದಿನೆಂಟು ಸೂಳಿನೋಳ್ ಮಾಗಧಂ | ಮತ್ತದಂತಿಯ ತೆರದಿ ಕಾದಿದಂ ಮೂಜಗಂಬೆರಗಾಗೆ ವಾಯುಜನೊಳಂ|| ಚಿತ್ತಚಕಿತಂ ಶವದ ಪಲ್ಲುಬಿಸಿ ಕೂಡಿಸಲ್ | ಮತ್ತದಂ ಮರುತಸುತನರಿದು ಚಿತ್ತ ಭೂಪನಂ | ಪತ್ರಾಯುದಿಂ ಸೀಳಿದಂತರಂತೆ ಸಂಧಿಸಲು ಅಸುಬಾರಿ

ತಾಕ್ಷಣದೊಳೂ ||೧|| **ಭಾಮಿನಿ:—** ಅರಸನಳಿವನು ಕಂಡು ಬೆದರಿದ ಪುರಜನರು ಮಂತ್ರಿಗಳು ದುಃಖಾ| ಕರಣರಾದರು ಕೇಳಿದಳು ಪತಿಯಳಿದು ದನು ಅರಸೀ || ಕೊರಗಿ ರಾಣೀ ನಿವಹ ಮಧ್ಯದಿ | ಉರಗವೇಷ್ಟಿತ ಚಂದ್ರ ನೋಲ್ಮುಖ | ವಿರೆ ನಿಜೇಶನ ಶವದೆಡೆಗೆ ನಡೆತಂದು ಮರುಗಿದಳೂ ||೧

(ರಾಗ ಸೌರಾಷ್ಟ್ರ ಆದಿತಾಳ)

ಹರ ಹರ ಪತಿಯೆ ಹೀಗೆ | ಮಾರುತಿಯಿಂದ | ಮರಣವಾಯಿತೇ ನಿನಗೆ || ಸುರನರೋರುಗ ವೃಂದದಿ | ನಿನ್ನನು ಪೋಲ್ವ | ಧುರಧೀರರುಂಟೆ ಲೋಕದೀ ||೧|| ಹರನಿತ್ತ ವರಹಿಂಗಿತೇ | ಕೌಶಿಕಮುನಿ | ಕರುಣ ವಿಧಿಗೆ ತೀರಿತೇ || ಅರಸ ದೀರ್ಘಾಯುವಾಗೆಂದೂ | ವಿಪ್ರರು ನಿತ್ಯ ಹರಸಿದೂದೆಲ್ಲ ಹೋಯ್ತೆಂದೂ ||೨|| ಕಮಲ ಬಾಂಧವನಸ್ತಕೆ | ಪೋಗುವ ನಿದ್ರೆ | ಸಮಯವಲ್ಲೀ ವೇಳ್ಯಕೆ || ಪಮ ಘೋಷಣಾದಿ ಮಿತ್ರರೂ ಬಂದೀಗ ನಿನ್ನ | ಸಮಯವ ನೋಡುತಿರ್ಪರೂ ||೩|| **ವಾರ್ಧಿಕ:—** ಈ ತೆರದಿ ಚಿಂತಿಸುವ ಮಾಗಧನ ರಾಣಿಯಂ | ದೈತೇಯ ವೈರಿಯಪ್ಪಣೆ ಯಿಂದ ಮಂತ್ರಿಗಳ್ | ಕಾತರಿಸಬೇಡೆಂದು ತಿಳುಪೆ ನಸು ಸಂತೈಸಿಕೊಂಡು ನಿಜಸುತನ ಕರೆದೂ || ಪ್ರೀತ ನೋಡಗ್ನಿಯಂ ಪೋಗುವೆನನುಕೂಲಮಂ | ನೀತಳುವದೆಸಗೆಂದೊರೆದುಬಂದಸುರ ಕುಲವಿ| ಘಾತಕನಚರಣಾಬ್ಜ ದೊಳ್ಮಣಿದು ಭಕ್ತಿಯಿಂ ಕೈಮುಗಿಯುತಿಂತೆಂದಳು ||೧||

(ರಾಗ ಮಧ್ಯಮಾವತಿ | ಆದಿ ತಾಳ)

ದೇವರ ದೇವ ಲಾಲಿಸು ಎನ್ನ ಸೊಲ್ಲಾ | ಶವಪಾತಕ ಮಿತ್ರ ಯದುವಂಶ ಮಲ್ಲಾ || ಪಲ್ಲ || ಸೆರೆಮನೆಯೊಳಗಿರ್ದ ಭೂಮಿಪತತಿಯಾ | ಪೊರೆಯಲೋಸುಗ ಕೊಲ್ಲಿಸಿದೆ ಎನ್ನ ಪತಿಯಾ|| ಮರುಕವಿನ್ನೆನಗಿಲ್ಲ ದುಷ್ಟರ ನೀನು | ತರಿದು ಸಜ್ಜನರ ಪಾಲಿಪ ದೇವ ನೀನು ||೧|| ತರಳ ಈ ಶರ ದೇನನೆನ್ನ ನಂದನನೂ | ಸ್ಮರನಪೋಲೀತನ ರಕ್ಷಿಸು ನೀನೂ || ಅರಸನ ಕೂಡೆವಹ್ನಿಯನು ಹೊಕ್ಕಪೆನು| ಕರುಣಿಸಪ್ಪಣೆಯೆನಗಾಗ ಮಾಧವನು||೨|| ತರಳನ ವೈಭವವನು ನೋಡಿ ಸುಖದಿ | ಇರು ಚಿತ್ತವಿಲ್ಲದಿರ್ದಡೆ ವಹ್ನಿ ಸುಖದೀ || ಉರುಹಿ ದೇಹವ ಕಾಂತಸಹಿತ ನಾಕವನೂ | ಸೇರಿಸೆನ್ನುತ

ಕೊಟ್ಟನವಳ್ಗೆ ನೇಮವನೂ ||೭|| **ಭಾಮಿನಿ:—** ಹರಿಯುನೇಮವ ಪಡೆದು ಪತಿಯೊಡ| ಸುರಿಯು ಪ್ರೊಕ್ಕಳು ಕಾಂತೆ ಮಗಧನ | ತರಳಗುರು ಪಟ್ಟಾಭಿಷೇಕವ ದೇವಮಾಡಿಸಿದ || ಪುರಜನರ ಸಂತೈಸಿ ಕಾರದೊ| ಳಿರುವ ಭೂಪರ ಬಿಡಿಸಿ ಕಾಣಿಕೆ | ವೆರಸಿ ಬಂದರು ಮೂವರಿಂದ್ರ ಪ್ರಸ್ಥಪುರ ವರಕೇ: ||೧||

ವಾರ್ಧಿಕ— ಅನಘನೈತಂದು ಧರ್ಮಜಗೆ ವೃತ್ತಾಂತಮಂ | ಮನ ವಲಿದು ಪೇಳ್ದು ಮುಖಕಾಲಕ್ಕೈತಹೆವೆಂದು | ಮನೆಗಿಂದು ಪೋಪೆನೆಂದೆನುತ ನೇಮವನೊಂದು ಪುರಕ್ಕೈದೆ ಮರುದಿನದೊಳು || ಜನಪನೊಡ್ಡೋಲಗಂ ಗೊಟ್ಟು ಬಿಸುಸುಯ್ದು ನ್ನು | ಮನುಜೇಶಯಜ್ಞಸಂಪೂರ್ಣವಾದಪು ದೆಂತೋ | **ಎನುತ** ಕೆಲಬಲದ ವೇದವ್ಯಾಸಭೀಮಾರ್ಜುನಾದ್ಯರೊಡೆನಿಂ ತೆಂದನೂ ||೧||

[ರಾಗ ಭೈರವಿ ತಾಳ ಝಂಪೆ]

ಅನುಜ ಮುಖ್ಯರು ಕೇಳಿ | ಜನಪಯಜ್ಞವು ಮುಂದೆ| ಕೊನೆಗಾಂಬ ಬಗೆ ಎಂತು ಎನಗದನು ಪೇಳಿ: ||೧|| ಪಾರ್ಥಿವರ ಗೆಲಿದವರ| ಅರ್ಥ ವನುತಂದವನು | ಸ್ವಾರ್ಥದಿಂದೀ ಯಜ್ಞ | ಪೂರ್ತಿ ಎನ್ನಿಸದು ||೨|| ಅರಸರೆಲ್ಲರು ಅಳುಕಿ | ಕರವನೀಯುರು ಸುರರ | ತರುಣಿಯರು ಮುಖವಾಗ ದಿರಲು ನಕ್ಕಪರು ||೩|| ಅಣಕಿದನು ಕುರು ನೃಪತಿ| ಕುಂದಿದಪಳು ಜನರಾಜ್ಯ | ಗಣಿಕಾಪರಯುವತಿ | ಎಣಿಕೆ ಯೇನಿದಕೇ ||೪|| ಎನುತ ಧರಾಧಿಪ ನುಡಿಯೆ | ಅನಿಮಿಷೇಂದ್ರಜ ಕೇಳಿ | ಘನ ಪೌರುಷದೊಳಿ [illegible] ತವಕದಿಂತೆಂದಾ ||೫||

(ರಾಗ। ಮಾರವಿ| ಏಕತಾಳ)

ಅಗ್ರಜ ಬಿಡು ಬಿಡು ಚಿಂತೆಯು ಮುಲತರ| ವಿಗ್ರಹವನು ಮಾಡಿ| ದಿಗ್ವಿಜಯಕಪ್ಪವ ತರುವೆನು ನೋಡಿ | ಶ್ರೀಘ್ರದಿ ದಯುಗೂಡಿ: ||೧|| ಮಹಿಮರಿ ನೃಪವರಕೀರ್ತಿ [illegible] | ಕುಂದಿವಳೆ ಜನಮುಖದಿ: || ಅಣುಕದ ಗೈವನೆ ಕೌರವ ನಗುವನೆ | ಗಣಿಕೆಯರಾದಿವರಿ: ||೨|| ನೊರಜು ನೃಪಾಲಕರಂಜಿಸಿ | ಕಪ್ಪವ ತರದಿರೆ ಪಾವಕನೂ || ಕರುಣಿಸಿದಷ್ಟ [illegible]

ವಸುನಾ | ಧರಿಸಿದ ಫಲವೇನು ||೩|| ಎನುತಲಿ ಪಾರ್ಥ ಪರಾಕ್ರಮ
ಗೈಯ್ಯಲು | ಮುನಿಪ ಪರಾಶರನ|| ತನುಜನು ವೀಕ್ಷಿಸಿ ನುಡಿದನು ಪೊಗಳುತ|
ಅನಿಮಿಷಪತಿಸುತನಾ ||೪|| **ಭಾಮಿನಿ** – ಪೂತು ಫಲುಗುಣ ಭರತ
ವಂಶಸು| ಜಾತನಲ್ಲವೆ ನೀನು ನಿನಗೀ | ಮಾತು ಸಹಜವೆನುತ್ತ ವೇದ
ವ್ಯಾಸನಿಂತೆಂದಾ|| ನೀ ತೆರಳು ಬಡಗಕ್ಕೆ ಮಾರುತ | ಜಾತ ಪೂರ್ವಕೆ
ನಕುಲ ಪಶ್ಚಿಮ | ಕಾತನನುಜನು ದಕ್ಷಿಣಾದಿಶೆ ಪೋಗೆಲೆಂದೆನುತ ||೧||

ವಾರ್ಧಿಕ— ಮುನಿಪರಾಶರ ಪುತ್ರನಾಜ್ಞೆಯಿಂ ನೇಮಮಂ | ಜನಪ
ನನುಜರ್ಗೀಯಲವರು ನೃಪನಂ ಪ್ರಿಯಂ | ಘನಭಕ್ತಿಯಿಂದ ಬಲವಂದೆರಗಿ|
ಮುನಿಗಳ್ಗೆ ನಮಿಸಿ ಸಂತೋಷವೆರಸಿ|| ಮನದೊಳಚ್ಯುತನಡಿಯು ಭಜಿಸಿ
ಗುರುವಂನುತಿಸಿ | ವಿನುತ ಸುಮುಹೂರ್ತದೋಳ್ ಸೇನೆ ಸಹಪೊರಮಟ್ಟ |
ರನಿಲಜಾತಾದಿಗಳ್ ದಿಗ್ವಿಜಯಕೆಂದೆನುತ ರಿಪುಜನಂ ತಲ್ಲಣಿಸಲು ||೧||
ಕಂದಪದ್ಯಃ— ಧುರದೊಳ್ ಸಕಲ ನೃಪರಂ ಗೆಲಿದು | ಕಪ್ಪವಂ ತರೆ
ನೃಪನಾಗಳ್ | ಹರಹರಿಸಿಧಿಗಳ ನಪಹರಿಸಿತೋ | ಎನಲೊಪ್ಪಿತು ನೋಳ್ಪರ
ಕಂಗಳಿಗಂ ||೧|| **ಭಾಮಿನಿಃ**— ವ್ಯಾಸನಾಜ್ಞೆಯೊಳಂದು ಧರ್ಮಜ |
ವಾಸುದೇವನ ಕರೆದು ತಾರೆನು | ತಾಸುರೇಶ್ವರ ಸುತಗೆ ಬೆಸಸಲ್ ದ್ವಾರಕೆಗೆ
ಪೋಗಿ | ಭೂಸುತಾಧಿಪನಿರಿಗೆ ಪೇಳ್ದನು | ತಾ ಸುಭದ್ರಾಜ್ಯೇಷ್ಠ ಮನ್ನಿಸಿ |
ವಾಸವಾತ್ಮಜನೊಡನೆ ನುಡಿದನು ಮಧುರ ವಚನದಲೀ ||೧||

[ರಾಗ ಕೇತಾರ ಗೌರ ಅಷ್ಟತಾಳ]

ಬಂದೆಯು ಫಲುಗುಣ ಕುಶಲವೇ ಸರ್ವರು | ತಂದಿರೆ ಕಪ್ಪವನೂ ||
ಇಂದುನಿಮ್ಮಾಜ್ಞೆಯ್ಯೆವತ್ತಾರು ದೇವದಿ | ಸಂದುವೆ ಎನಲೆಂದನೂ ||೧||
ದೇವ ನಿಮ್ಮಡಿಯ ಕಿಂಕರರಾದ ನಮ್ಮಾಜ್ಞೆ | ಗಾವನಡ್ಡೈಸುವನು
ಭೂವಲ್ಲಭರು ಕಪ್ಪವಿತ್ತರೆಂದಾವಾಸು | ದೇವಂಗೆ ಮಂಗಳೆಂದನು ||೨||
ಪರಿವಾರ ಸಹ ನಿಮ್ಮ ಕರೆದು ತಾರೆನ್ನುತ್ತ | ಧರಣೀಶ ಕಳುಹಿದನು|| ಕರು
ಣದಿ ನೀ ಬಿಜಯಂಗೈಯ್ಯ ಬೇಕೆಂದು ಚರಣಾಬ್ಜ ಕೆರಗಿದನೂ ||೩||
ವಾರ್ಧಿಕ— ನರನೆಂದ ವಾಕ್ಯಮಂ ಕೇಳ್ದು ಸಂತೋಷವಂ | ಧರಿಸಿ
ಪರಿವಾರಸಹ ಲಕ್ಷ್ಮೀ ಮನೋಹರಂ | ಪೊರಟು ಶಕ್ರಪ್ರಸ್ಥ ಪುರಕೈತರ

ಲ್ಯಾಗ ಬರಲು ಬಂದೊರೆಯೆ ನೃಪನೂ|| ಹರುಷದಿಂ ಬಂದಿದಿರ್ಗೊಂಡು ಪೂಜೆಯಂ ವಿರಚಿಸಿ| ಸುವರ್ಣಾಸನಾಗ್ರದೊಳ್ ಕುಳ್ಳಿರಿಸಿ | ಚರಣಗಳ ಗೆರಗಿ ಕೈಮುಗಿದೆದ್ದು ಭಕ್ತಿಯಿಂ ಮಾಧವಂಗಿತೆಂದನೂ ||೧||

(ರಾಗ ಸೌರಾಷ್ಟ್ರ ತಾಳ ತ್ರಿವಿಡೆ)

ಎಲೆ ಮುರಾಂತಕ ಕೇಳು ನಿತ್ಯದಿ ನೆಲವ ಶುದ್ಧೀಕರಿಪ ಕೆಲಸವು | ಕೆಲವು ಜನರಿಂದಾಗದದಕೇ ನೊಲಿದು ಬೆಸಸೂ ||೧|| ಎನಲು ನುಡಿದನು ಬೇಗ ಮಾರುತಿ | ಯನುಕರಿಸಿ ನೇಮಿಸು ಪುರಾರಿಯು | ನೆನೆವ ಪುರುಷಾ ಮೃಗವ ತರಲೆನೆ ಜನಪಪೇಳ್ದ ||೨|| ಇರುವನೆಲ್ಲಿ ಮೃಗೇಂದ್ರನೆನಗದ | ಕರುಣದಿಂ ಪೇಳೆನಲು ನುಡಿದನು | ಮುರವಿನಾಶನು ನೃಪಗೆ ಹೇಮಾದ್ರಿಗಿರಿಯಾ ಬುಡದೀ ||೩|| ಹವನ ನೆನೆಯುತ ಮಾನಸಾಖ್ಯಯ | ಸರದ ತೀರದೊಳಿಹುದು ಹೋಗೆನೆ | ತೆರಳಿ ಭವನಕೆ ಭೀಮಸೇನನ ಕರದು ಸುದಾ ||೪|| ಅನುಜ ಕೇಳೈ ಹರಪದಾಂಬುಜ ವನುಭಜಿಪ ಪುರುಷಾ ಮೃಗೇಂದ್ರನ / ಘನತವಕದಿಂ ತಾರೆನಲು ಮಾರುತಿ ಜನಪಗೆರಗೀ ||೫|| ಕರದಿಗದೆಯನು ಪಿಡಿದು ಮೃಗವರ | ನಿರುವ ಜಾಗವ ಕೇಳಿ ಮುಂದಕೆ | ತೆರಳೆ ದಾರಿಯೊಳೊಂದು ವನದಲಿ ಪರಿಕಿಸಿದನೂ ||೬|| **ಭಾಮಿನಿ—** ಜನಪ ಕೇಳ್ ದಶಕಂಧರನಮದ | ವನು ಹರಿಸೆ ರಾಮಂಗೆ ಸೇವಕ| ನೆನಿಸಿ ಸೀತಾ ಶೋಕನಾಶನಗೈಯ್ಯೆ ನಿರ್ಜರರಾ || ವಿನಯದಿಂ ರಕ್ಷಿಸೆ ಕಪೀಶ್ವರ| ನೆನಿಸಿ ವಚಜಾತನುಜೆಯರಸನು | ಅನಿಲಜನ ಮಾರ್ಗದಲಿ ರಾಮನ ನೆನೆಯುತೆಸೆದೀರ್ದಾ ||೧|| **ವಾರ್ಧಿಕ—** ಪುರವೈರಿ ವೀರ್ಯ ಸಂಜಾತನಂ ವಾತನಂ | ನರಕ ಭಯವಿದ್ರಾವನಂ ಮಹಾದೇವನಂ | ದುರಿತಾಬ್ಧಿ ಕುಂಭ ಸಂಜಾತನಂ ಖ್ಯಾತನಂ ಸೋಮನಂ ರಿಪು ಭೀಮನಂ|| ಧರಣಿಜಾ ಶೋಕಹರ ಕಾರನಂ ಧೀರನಂ | ಸುರನರೋರಗಪುರ ವಿಹಾರನಂ ಶೂರನಂ| ಧುರಧೀರ ವಿಜಯಹನುಮಂತನಂ | ಶಾಂತನಂ ಭೀಮನಿದಿರೊಳ್ಕಂಡನೂ ||೧||

[ರಾಗ ಕೇದಾರಗೌಳ ಅಷ್ಟತಾಳ]

ಇದಿರೊಳು ನೆಲಸಿಹ ವಜ್ರ ದೇಹನ ಕಂಡು | ಮುದದಿಂದ ವಾಯುಜನೂ|| ವದಕಭಿ ವಾದಿಸೆ ತೆಗೆದಪ್ಪಿ ಪರಸುತ್ತ | ವಮುಳದಿ ಬೆಸಗೊಂಡನೂ ||೧|| ಜನಪ ಫಲುಗುಣ ದಾದ್ರಿ ತನುಜರು ದ್ರೌಪದಿ | ತನು

ಭವರ್ಕಳು ಸಹಿತ || ಘನಸೌಖ್ಯಯುತರೇ ನೀಬಂದ ಕಾರಣವೇನು ಎನೆ ಪೇಳ್ದ ಪಾಂಡುಜಾತಾ ||೨|| ಅರಸ ಯಾಗವಪಾಳ್ದ ಪ್ರಮುಖನೃಗೇಂದ್ರನ| ಕರೆದೊಯ್ಯಲೈ ತಂದೆನು || ಪಿರಿದು ಜನ್ಮಾಂತರ ಪುಣ್ಯದಿಂದಲೆ ನಿಮ್ಮ| ಚರಣಾಬ್ಜವನು ಕಂಡೆನು ||೩|| ಅನುಜ ಕೇಳಾ ಮೃಗರಾಜ ಮನೋವೇಗ| ಬಲ್ಲವನವನೊಡನೆ|| ಅನಿಲಗಸಾಧ್ಯವೈದುವರೆ ನಿನ್ನಯ ಪಾಡೇನೆನಲೆಂದ ನಿವನೊಡನೇ ||೪|| ಬಿಡುಬಿಡೀ ಮಾತು ಘನವೆ ಯನ್ನೆಯ ಮೇಲ ನಿ| ನ್ನಡಿಯೋಪೊಂದಿರಲೀ| ನಡೆವೆ ನಾ ಮೃಗಕಿಂತ ಮುಂದೆನೆ ವಾಯುಜ| ನುಡಿದ ತನ್ನನುಜನಲ್ಲೀ ||೫|| ಆದರಂಜದಿರಿನ್ನು ನಿನ್ನ ಭಾಷೆಯಾನೀಗ| ಕಾದುತೋರ್ಪೆನು ಬಾಲದೀ|| ಐದರ ಮೇಲ್ಮೂರು ರೋಮವ ಕೀಳೆನೆ| ಕೈದುಡುಕುತ ಸತ್ವದೀ ||೬|| ತೆಗೆಯಲಾರದೆ ಕಡುಬಳಲಿ ಮಾರುತಜಾತ ನಗುತ ಮುಂದೈ ತರಲೂ|| ಉಗಿದೆಂಟು ಕೂದಲು ನೀಡಿದ ಕುಂತಿಯ| ಮಗಗೆ ತಾ ತೋಪದೊಳೂ ||೭|| **ಭಾಮಿನಿ**— ತರಳ ನೀಪೋಗಾನೃಗೇಂದ್ರನ| ಕರೆತವಕದಿಂ ನಿನ್ನ ಸಂಗಡ| ಬರುವೆನೆಂದಾಕ್ಷಣವೆ ರೋಮವನೊಂದನಿಳೆಗಿಡಲು| ಹರನುಜನಿಸುವನವನ ಪೂಜೆಯ| ವಿರಚಿಸುತ ಮೃಗಪಿರಲು ಮುಂದಕೆ| ಸರಿ ಪಥದೋಳ್ ಕ್ರಮದಿ ಪೋಗೆಂದೆನುತ ಬೀಳ್ಕೊಟ್ಟಾ ||೧|| **ವಾರ್ಧಿಕ**— ಹನುಮನಿಂ ಬೀಳ್ಗೊಂಡು ಮುದವೈರಿಯಂಮನದಿ| ನೆನೆಯುತಾ ಮೃಗವ ಬಳಿಗೈದಲನಿತರೊಳತ್ತ| ಮನುಜ ವಾಸನೆಯಲ್ಲಿ ಗೋಚರಿಪುದೆನುತ ನಾಶಿಕವ ನರಳಿಸಿ ದೆಸೆಯನೂ|| ಮಾಂಪಟಾಗಿ ನೋಡುತಿರಲನಿತರೋಳ್ ವಾಯುಜಂ| ತನಗಿದೇ ಸಮಯವೆಂದೈತಂದು ಮೃಗರಾಜ| ನನುಕಂಡು ಕಾಲ್ಗೆರಗಲಿತ್ತಿಸು ಪ್ರೇಮದಿಂ ಭೀಮನಂಟಿಸಗೊಂಡನೂ ||೧||

[ರಾಗ ಆನಂದ ಬೈರವಿ ಆದಿತಾಳ]

ಯಾರ ನಂದನ ಯಾರ ವಂಶಜ ನಾಮವೇನು ನಿನ್ನ | ಬಂದಿಹ| ಕಾರಣಂಗಳ ನೀಗ ಪೇಳಲೆ| ವೀರನೈಸೆ ನೀನು|| ಮನುಜ ನಂ|| ಜಾರವಿಲ್ಲದ ಎನ್ನ ಠಾವಿಗೆ| ಸೇರಿಮವಕೆ ನಾನು| ಮೆಚ್ಚಿದೆ| ಪೂರೈಸುವೆನು ನಾನಿನ್ನ ಪೇಕ್ಷೆಯ| ಸಾರೆನಲು ಕಲಿಭೀಮ ಪೇಳಿದ ||೧|| ಕೌರವ ಪ್ರಿಯ ನಂಕಜೋತ್ತಮ| ವೀರಪಾಂಡು ನೃಪನ| ದ್ವಿತಿಯಕು| ಮಾರಕನು ಜನರೆಲ್ಲ

ರೆನ್ನೆಯು ನಾಮ ಭೀಮಸೇನ | ಎನುವರು | ಧೀರಲಾಲಿಸಿ ಕೇಳು ಕಿರಿಯನು ನಾನು ಧರ್ಮಸುತನಾ | ನಮ್ಮಯ ಚಾರು ಯಜ್ಞಕೆ ನಿಮ್ಮನ್ನೊಯ್ವರೆ ಸಾರಿದೆನು ಕೃಪೆಮಾಡಿ ಯೆಂದನು ||೨|| ನಾಗಬಲ ಕೇಳ್ ಬರ್ಪೆ ನಿನ್ನೊಡನೀಗ ಮುಂದೆ ನೀನು | ನಡೆ ಹಿಂ | ದಾಗದಿರು ಹಿಂದಾದರಾಕ್ಷಣ | ನಾಗಬಂದು ನಾನು | ಕಾಲ್ಗಳ | ತಾಗಿ ಕಲ್ಲೊಳು ಪೊಯ್ವೆ ಮರೆಯದೆ | ಪೋಗಲೆಂದನವನು | ವಡಬಡು | ತಾಗ ರೋಮದೊಳೊಂದ ಭೂಮಿಗೆ | ನೀಗಿ ನಿಜ ಪುರದತ್ತ ತಿರುಗಿದ ||೩|| **ಭಾಮಿನಿ—** ಹರಿ ಕುಲಾಗ್ರೇಸರನ ರೋಮವು | ಧರೆಗೆ ಬೀಳಲು ಲಿಂಗ ಮೂಡಿತು | ಪರಿಕಿಸುತ ಮೃಗವರನು ಪೂಜಿಸುತಿರುವಿತ್ತರೊಳ್ ಪಥವಾ || ಸರಿದನೆಂಟಾವರ್ತಿ ಈ ಪರಿ | ವಿರಚಿಸುತ್ತ ಮೃಗ ಪತಿಗೆ ಸಿಕ್ಕದೆ | ಪುರಕೆ ಬಳಲುತ ಬರಲು ನರತಿಳಿದಾಗಲ ನಿಲಜನ ||೧||

ಕಂದಪದ್ಯ— ಶಿರವಂ ಫಲುಗುಣ ಪಿಡಿಯಲ್ | ಭರದಿಂ ಬಂದಾಮೃಗವರ ಭೀಮನ ಕಾಲಂ | ತ್ವರಿತದಿ ಪಿಡಿಯುತ ನಿಂದಿರೆ | ಮೊದಲಿತು ಮೃಗಪತಿ ನರನಿಗೆ ಘನ ಹೋರಾಟಂ ||೧||

(ರಾಗ ಸಾವೇರಿ ಅಷ್ಟತಾಳ)

ಅತ್ತಲೆಳೆವ ಮೃಗರಾಜನು | ವಳ | ಗಿತ್ತ ಸೆಳೆವನಿಂದ್ರ ಜಾತನು || ಅತ್ತ ಶೆಳೆವ ನೀಶಭಕ್ತನು | ಬಳಿ | ಕಿತ್ತಲುಗಿವ ಪಾಂಡು ಪುತ್ರನು ||೧|| ಇವರಿಬ್ಬರೀಪರಿ ಸತ್ವದಿ | ಸರಿ | ಸಮಯದಿಬ್ಬರ ಶಕ್ತಿ ಮಧ್ಯದೀ || ಪವನಜ ಬಸಳ ಬೆಂಡಾದನು | ಕೇಳಿ | ಅವನೀಶನಲ್ಲಿ ಬಂದೆಂದನು ||೨|| ಹರ ಭಕ್ತ ನೀ ಧರ್ಮವರಿಯೆಯಾ | ಭೀಮ | ನರಗೆ ಸಲ್ಲುವದಿದು ನಿಶ್ಚಯಾ || ಶಿರವೇ ದೇಹಕೆ ಮುಖ್ಯವೆನ್ನಲು | ಮೃಗವರ | ನದೆಂತುಯೆನಲೆಂದನವನೊಳು ||೩|| ಸರ್ವ ದೇಹಕೆ ತಲೆ ಮುಖ್ಯವು | ಕೇಳು ಸರ್ವ ಬೀಜಕೆ ಜಲಸೌಖ್ಯವು || ಸರ್ವಶಾಸ್ತ್ರಕ್ಕಾದಿ ವೇದವು | ಮುಖ್ಯ | ಸರ್ವೌಷಧಿಗಳೊಳನ್ನವು ||೪|| ಅರಸನಿಂತೆನಲೊಡಂಬಟ್ಟನು | ಬೇಗ ಮರುತಜಾತನ ಕಾಲಬಿಟ್ಟನು || ಹಿರಿಮ ಮೆಚ್ಚಿದೆ ನಿನಗೆಂದನು | ಬೇಡು | ವರವನೀಯುವೆನೆನಲಿಂದನು ||೫|| ದಿವನೇಕು ನಮ್ಮೊಟ್ಟಿಯೊಳು ನೀನು | ಇಲ್ಲಿ |

ವಿನಯದಿನೆಲಸೆನ್ನಲದರನು| ಧನದ ಮಿತ್ರಾರ್ಜಕನೊಪ್ಪಿದ | ಜಾಗ| ವನು ಶಿವಪೂಜೆಗೆ ಕೇಳಿದ||೬|| **ಭಾಮಿನಿ**– ಕಂತುಪಿತನಾಜ್ಞೆಯೊಳು ತಮ್ಮವ|ರಂತಿಕಕೆ ದೂತರನು ಕಳುಹಲು | ಸಂತಸದಿ ಪೊರಮಟ್ಟು ಬಂದನು ಕೌರವೇಶ್ವರನೂ|| ಬಂದ ದುರ್ಯೋಧನ ನೃಪನಕರ| ತಂದು ಮನ್ನಿಸಿ ಮಿಕ್ಕ ಭೂಪರನೊಂದುಳಿಯು ಬರವಾಡಿ ಕೊಂಡೊಲವಿಂದ ಭೂಸುರರಾ|| ಸಂದಣಿಯು ಕೂಡಿಸಿ ಧರಾಮರ| ರೆಂಬ ವೋಲ್ಮೆಖಕವಿಳವಸ್ತುವ| ತಂದು ಜೋಡಿಸಿ ಧರ್ಮಸುತ ಮುದಯುಕ್ತನಾಗುತ್ತಾ ||೭||

ವಾರ್ಧಿಕ— ಗುರುಭೀಷ್ಮರಿಂಗೆ ಮೇಲಾರ್ಕೈಕೆ ಕೌರವೇ| ಶ್ವರನುಕನಕಾಧ್ಯಕ್ಷನವನನುಜರರಸರ್ಗೆ| ಪರಮನವ ವಸ್ತ್ರ ಮಾಲ್ಯಾಭರಣಮಂ ಕೊಡುವ ಕೆಲಸ ಸರ್ವರನೂಟಕೆ|| ಕರೆದು ಕುಳ್ಳಿರಿಸೀರ್ಪ್ರಮವಿಕರ್ಣಂಗೆ ಭೂಪರಿಗೆ| ಕರಿರಥ ಹಯಾದಿಗಳ ನೀಪ್ರುದಿನಜಗೆ ಮಿಕ್ಕ || ವರಿಗುಳಿದ ಕೆಲಸವಂ ಭೀಷ್ಮನೆಂದಂತೆ ಮುರ ಮಥನ ತಾ ನೇಮಿಸಿದನು ||೧||

(ರಾಗ ಕಾಂಭೋಧಿ ಝಂಪೆ)

ಬಂದಾಗ ಧರ್ಮಜನು ವಂದಿಸುತ ಹರಿಪದಕೆ ನಿಂದು ಕೈಮುಗಿದು ತುಸುರಿದನೂ||ಮುಂದೇನುಜೀಯಾಟಿಸಸೆಂದೆನುತವೇಳುತಿರಲೆಂದಶ್ರೀಕಾಂತ ನಗುತಾ ||೧|| ಧರಣಿಪತಿ ಹೋಗು ಮುನಿವರರಿಂದ ದೀಕ್ಷೆಯನು ತರಿಸುವಾನಿಹೆನು ಬೆದರದಿರು || ಸುರನದೀಸುತ ದ್ರೋಣನಿರಲು ನೀ ಮನದೊಳಗೆ ಬರಿದೆ ಚಿಂತಿಸಲ್ಯಾತಕಿನ್ನು ||೨|| ಎಂದು ಹರಿನುಡಿಯುಲಾನಂದದಲಿ ಧರ್ಮಜನು ವಂದಿಸುತ ದೀಕ್ಷೆಯನು ಧರಿಸಿ ಕಂದುಗೊರಲಾತ್ಮನ ಪೂಜಿಸುತಲತಿ ಭಕ್ತಿಯಿಂದ ಪುಣ್ಯಾಹ ನಾಂದಿಗಳನೂ ||೩|| ವಿರಚಿಸುತ ಋತ್ವಿಜರ್ಗಾವರಣೆಗಳನಿತ್ತು ಭೂಸುರಾರಿಂಗೆ ವಂದಿಸಿದ ಬಳಿಕ || ಹರುಷದಿಂದಲಿ ಸಕಲ ವೇದ ಘೋಷಗಳನ್ನು ಧರಣಿಸುರರ್ಗೈದೆ ಘೋಷಿಸಲೂ ||೪||

ವಾರ್ಧಿಕ—ಚರಣತ್ರಯಂಗಳಾಗಿರೆ ಹೇಮ ಭಾಸುರದಿ | ಕರವೇಳರಿಂದಲೊಂದರ ಶಕ್ತಿಯುಂ ಧರಿಸಿ ಸುರಿದುಂಬ ನಾಲಿಗೆಗಳೇಳಕ್ಕೆ ಶಿರವೆರಡುಂ ಶೃಂಗ ನಾಲ್ಕು|| ತರುಣಿಯುರು ಸಂಕೇತನಿಜ್ವಾಲಿನಿಯುರಿಂದ| ಮೆರೆವ ಟಗಣ

ಷ್ಣೇರಿ ವೈಯ್ಯಾರದಿಂದಿರುವ | ಸುರ ಸೂಪಕಾರನಂ ಕರೆತಂದು ಪೂಜಿಸಿದನು ಯಾಜ್ಞವಲ್ಕ್ಯ ||೧||

[ರಾಗ ಸೌರಾಷ್ಟ್ರ ತಾಳ ತ್ರಿವಿಡೆ]

ಚರು ಪುರೋಡಾಶಾಜ್ಯ ಸಮಿಧೆಯ | ವೆರಸಿ ದ್ರವ್ಯಗಳಿಂದ ಹೋಮಿಸೆ| ಸುರರು ಸಂತೋಷಿಸುತಲಿರ್ದರು ಭರಿತರಾಗಿ ||೧|| ಈತೆರೆದೊಳೀಳ್ದ ವಸು ಲಕ್ಷ್ಮೀನಾಥನಭಿಮತದಿಂದ ಯಜ್ಞವ | ನೋತು ಧರ್ಮಜ ನೆಸಗಿ ಗಂಗಾ ಜಾತನೊಡನೆ ||೨||

[ರಾಗ ಸಾಂಗತ್ಯ ತಾಳ ರೂಪಕ]

ಮುತ್ತ್ಯಯ್ಯ ಕೇಳು ಕೂಡಿಹ ಬಹು ಭೂಪರ| ಮೊತ್ತದೊಳಗ್ರ ಪೂಜೆ ಯಾಸು || ಇತ್ತಪುದಾರ್ಗಾರು ಯೋಗ್ಯರು ಯಾನಗದ | ವಿಸ್ತರಿಸೆನಲೆಂದನ ವಸು ||೧|| ಕಂಡ ಕೇಳೀ ಭೂಮಿಪಾಲ ಸಂದೋಹದಿ | ನಂದನಂದನನೇ ಉತ್ತಮನು || ಇಂದೀ ಯಾಗಕೆ ಪೂಜ್ಯ ನಿನಗೆ ಮಾನಸದಲ್ಲಿ| ಸಂದೇಹ ವ್ಯಾಕೆ ಕೃಷ್ಣನನೂ ||೨|| ಕರತಂದು ಮನ್ನಿಸಿ ಯಾಗ ಪೂಜೆಯನೀಯೆ | ಪರಿಪೂರ್ಣವಪ್ಪುದೀ ಮಖವು|| ಪರಮಾರ್ಕಾಂಡೇಯಾದಿಗಳನಹುದಲ್ಲವೋ ಭರದಿಂದ ಕೇಳು ನೀನೆನಲೂ ||೩|| ಮುನಿಗಳೆಲ್ಲರು ಕೇಳಿ ಭೀಷ್ಮನ ಪೊಗಳಿತ್ತ್ರ| ಜನಪನೊಳೆಂದರಚ್ಯುತನೂ|| ಮನುಜೇಶರೊಳು ಮುಖ್ಯ| ನಿಮಗೀಪ ಪ್ರಮ್ಹತ ವೆನಲದ ಕೇಳಿ ಭೂಮಿಪನೂ ||೪|| ಹರುಷದಿ ಸಹದೇವ ಗೋರೆಯಲಾತನು ಪೋಗಿ | ಕರೆತಂದು ನೃಪರ ಮಧ್ಯದಲಿ|| ಹರಿಯನು ಪೀಠದೊಳ್ ಕುಳ್ಳಿರಿಸಲು ಕಂಡು | ಸುರರಭ್ರದೊಳು ಜಯವೆನಲೂ ||೫|| **ವಾರ್ಧಿಕ—** ಧರ್ಮಜಂ ಬಳಿಕ ಸಂತೋಷದಿಂದೈತಂದು | ಧರ್ಮಸ್ವರೂಪಂಗೆ ರಾಜೋಪಚಾರವಂ | ಪೇರ್ಮೆಯಿಂದೆಸಗಿ ರಾಜರ ಮಧ್ಯದೊಳ್ಕೊಟ್ಟ ನಗ್ರಪೂಜೆಯ ನಮರನೂ || ದುರ್ಮತಿ ಮಹೀಶರೀಕ್ಷಿಸಿ ತಮ್ಮ ಮಾನಸದಿ | ಪೇರ್ಮುನಿದು ಕೃಷ್ಣಭಯದಿಂ ಸುಮ್ಮನಿರೆ ಚೈದ್ಯ | ಗರ್ಜಿಸುತ ಅಚ್ಯುತನ ದ್ವೇಷದಿಂ ರೋಷದಿಂ ಸಹದೇವಗಿಂತೆಂದನೂ ||೧||

[ರಾಗ ಸೌರಾಷ್ಟ್ರ ತಾಳ ತ್ರಿವಿಡೆ]

ಏನಲವೊ ಸಹದೇವ ಮಾಧೇಯ | ಮಾನಸಿರ್ಧಿಗೆ ಮುಂದೆ ನಂದನ|

ಕೂನುಬಿಂಗಾಸನದ ಮೇಲೆ ಸುಮಾನವೇನ್ನೈ ||೧|| ನೀನರಿಯುದವ ನಿಮ್ಮ ಮಾಗಕೆ| ಹಾನಿಯಲ್ಲವೆ ನಿಮ್ಮ ಹಿರಿಯರ|| ದೀನ ಮಾಡಿದರಕಟ ಖೂಳನೆ ನೀನು ಜಗದೀ ||೨|| ಇವನಲೀ ಯದು ರಾಜ ಕುಲ ಸಂಭವನು ನೃಪ ಮಧ್ಯ ದಲಿ ಹರಿ ಪೀ| ಠವನಡರ್ವರೆ ಯೋಗ್ಯನೇ ಮೋಹದ ಗುಣವಾ ||೩|| ಅವನಿಯೊಳಗೆಲ್ಲವರು ತಿಳಿಯರೆ | ರವಿಸಮಾನ ಸುತೇಜ ಧಾತ್ರೀ| ಪರರ ಮಧ್ಯದೊಳಗ್ರಪೂಜೆಯು ಶಿವ ಶಿಬಿವವಗೇ ||೪|| ಪರಮ ಮುಖವೀ ಮುಖದ ಪ್ರಾಜೆಗೆ | ಧರಣಿಪಾಲಕರೆಲ್ಲರುಳಿದೀ| ನರಕಮರ್ದನ ಪೂಜ್ಯನಾದನೆ ಪರ ಹರಿಂದೂ ||೫|| ನೀ ತಿಳಿಯದವ ನಿನ್ನ ಸಂಗಡ | ಮಾತು ತನಗೇಕೆಂದು ಜರೆದಾ | ಭೂತಳಾಧಿಪ ಚೈದ್ಯ ಗಂಗಾಜಾತಗೆಂದಾ ||೬||

(ರಾಗ ಕಾಂಭೋಧಿ ತಾಳ ಝಂಪೆ)

ಸುರನದಿ ಪುತ್ರ ಕೇ| ಳರಿಯದವರೀ ಪಾಂಡ| ವರು ನೀನು ರಾಜವಂಶದಲೀ| ಹಿರಿಯ ಘನ ವಿದ್ವಾಂಸ ನಾಗಿರ್ದು ಯಾದವನ| ಕರೆದು ಪೂಜಿಸಿಪೇಕ್ಷೆ ಧರದೀ ||೧|| ಬಾಲತ್ವದಿಂದ ಅಭ್ಯಾಸಿಸಿದ ಸಚ್ಛಾಸ್ತ್ರ | ಜಾಲಂಗಳಿಂದು ವಸುದೇವ || ಬಾಲನೊಳು ಮರೆತೆಯಾ ಕರುಣಿಸದೆ ಯಾಕವನಿ | ಪಾಲಕರ ಮಧ್ಯದೊಳಗಿಂದೂ ||೨|| ವೀರ ಮಾದ್ರೇಶ ಶಸ್ತ್ರಾಚಾರ್ಯ ಗುರುಪುತ್ರ | ಭೂರಿಶ್ರವಾದಿ ಹಿರಿಯವರೂ || ಜಾರೂ ಪೂಜೆಗೆ ಪಾತ್ರರಲ್ಲ ನಿಮ್ಮಲಿಗೋಪ| ನಾರಿಯರ ಜಾರನಂದದೊಳು ||೩|| ಅನ್ಯನೇಸಿಂಧುಭೂಪರನೀ ಮಹಾಮುಖಕೆ ಮಾನ್ಯನಾಗನೆ ಪಾಂಡ್ಯನೃಪನೂ ||೪|| ವೀರ ಕಾಂಭೋಜೇಶ ಸೋಮದತ್ತ ಮಹೀಶ | ಘೋರಮಣ ಮಾಳವಾದಿಗಳೂ || ಸಾರ ಮುಖ ಪೂಜಾರ್ಹರಲ್ಲ ತುರುವಳ್ತಿಯರ | ಜಾರ ದಧಿಚೋರ ನಂದದೊಳೂ ||೫|| ಸೇರಿಪನ ಸರಿ ಮಂಚದಲ್ಲಿ ಮೇಣ್ಸರಸಿರುಹ| ಭವನ ಸರಿ ಸಿಂಹ ಪೀಠದಲಿ|| ದಿವಿಜೇಶನಂದು ಶೀಬಿಯಲಿ ಮೆರೆವ ಧರಣಿಪರ| ನಿವಹವಿರಲಿವರ ಮಧ್ಯದಲಿ ||೬|| ಪರಮ ವೈಭವದಿಂದ ತಿಳಿಯದವರಂದದಲಿ| ಕರತಂದು ಹರಿಯುವಿಷ್ಟರದಿ|| ಇರಿಸಿ ಮನ್ನಿಸಿದೊರದೆ ಮುಖವಳಿದೆ ನಿನ್ನವಗೆ| ಸರಿ ಬರರೆ ನೆರೆದ ಭೂಭುಜರೂ||೭|| ಪರಸಿಲ್ಲದವಳು ಪಡೆದವಗೆ ಗತಿಯುಪ್ಪುದಕೆ|ಪರರಿಗುದಿಸಿದರ್ ಮಾಳ್ಪ ಮುಖಕೆ ಧರಣಿಯಲಿ ತುರುವಳ್ತಿಯರ ಮಿಂಡನೇ ಪೂಜ್ಯ| ಅರಸುಗಳು ಮಾನ್ಯರಲ್ಲ ದಕೆ||೮|| ಬೀಬಿಸಾರಣ್ಯದಲಿ ಕೋಕಿಲಂಗಳಿಗೆ ಸಂಭಾವನೆಯು ದೊರಕದಂದ

ವಲ್ಲಿ || ಈ ಧಿಕಾರಧ್ವರದಿ ರಾಜಗೆ [stamp] | ಗೋವಳರಿ ಮಾನ್ಯರಿ ಮುಖಕೆ ||೯||

[ರಾಗ ಕಾಂಬೋಧಿ ಝಂಪೆತಾಳ]

ಮರುಳ ಗೋವಳನೆ ಕೇಳರಿಯುವವರುಪಚರಿಸಿದರು ನಿನಗೆ ಬದ್ಧಿ ಬೇಕಲ್ಲ | ಘೋರೆ ಧೊರೆಗಳಿರುತ್ತಿರಲು ಸಮ್ಮುಖದೊಳೈತಂದು ಹಿರಿಯತನದಿಂದ ಕುಳಿತೆಯಾ ||೧|| ಗೋವಳರೆ ಕುಲಹೀನರವರೊಳಿವನತಿ ಕೆಡುಕ ದೇವತ್ರಿಗಿತ್ತ ಬಲಿ ಕೂಳ | ದೇವ ವಿಲ್ಲದೆ ತಿಂದಿರುವ ಭಂಡ ನಿನಗಿಲ್ಲ ಭೂವರರ ಮುಂದೆ ಪ್ರಾಪ್ತಿಗಳೀ ||೨|| ಲಲನೆಯರು ಹದಿನಾರು ಸಾವಿರದ ಮೇಲೆಂಟು ಬಳಿಸಿ ಕೊಂಡೆಯಲ ಹೇಸಿಸದೆ|| ಹಳೆಯ ಹದ್ದನು ಏರಿ ಮೆರೆವವಗೆ ಮಹಾ ರಾಜ ಬಳಗದೆಡೆಯೊಳು ಕೂಟವೇನು ||೩|| ನಿನ್ನ ಪಿತ ನಾಸರಾಜ್ಯವ ಧೊರೆಯು ಕೃಷ್ಣ ಪೇಳ್ ಹೊನ್ನ ಮಂಚದಿ ಮಂಡಿಸುವರೆ|| ಬೆಣ್ಣೆ ಮೊಸರನು ಕದ್ದು ತಿಂದ ಡೊಳ್ಳನು ತೋರ ಲೆನ್ನಿದಿರೊಳೀಗ ಹಮ್ಮಿನಲೀ ||೪|| ಹೆಣ್ಣು ಮಕ್ಕಳ ಭ್ರಾಂತಿನಿಂದ ಪೋಗಿರಲು ಕಥೆಯನು ಮುಗಿಸಿದ ಮೂಳ ಸ್ವಸೆ| ಇನ್ನು ಸಿಂಹಾಸನವ ನಿಳಿ ಎನಲು ಕೇಳ್ದು ಕಿಡಿ|ಯನ್ನುಗುಳುತಿಪ್ಪ ಯಾದವರೂ||೫|| ಬಡಿದಿವನ ನೀಗ ಯಮನೆಡೆಗೆ ಕಳುಹುವೆವೆಂದು ಜಡಿದು ಯಮಬೀರಬ್ರೈತರಲು | ಗುಡು ಗುಡಿಸಿ ಭೀಮ ನೊಂದಡೆ ಯೊಳಗೆ ಹೂಂಕರಿಸೆ | ನುಡಿದ ನಂ ಕೌತುಕವ ಭೀಷ್ಮ ||೬||

[ರಾಗ ಪುನ್ನಾಗ ತೋಡಿ ಅಷ್ಟ ತಾಳ]

ಮಾನಿನಿ ತೆಂಬಿ ಬೇಡಿದೆಯೊ ಜ್ವೈದ್ಯ | ಪಿನಾಕಿ ಸಖನು ಕೃಷ್ಣ ಸಾರಮಂದ್ಯ| ಕಾಕನಾಡುವರೆ ಪಾಂಡವನಿಗೆ | ಭಕ್ತ ನೀ ರಕ್ಷಕ ಬ್ರಹ್ಮ ಜನಕಗೆ ||೧|| ಖೂಳ ತಮಾಖ್ಯ ವೇದವ ಕೊಂಡು| ಪಾತಾಳಕಿಳಿಯೆ ಮತ್ಸ್ಯತನುಗೊಂಡು || ಸೀಳಿ ದುಷ್ಟನ ಮಹತ್ತ್ವಮ ನೀತ| ಕೂರ್ಮ ನೊಳು ತೋಷದಲಿ ಭೂಧರ ಪೊತ್ತ ||೨|| ಭೂಮಿಯು ಚಯ್ಯೊಯಂದದಿ ಸುತ್ತಿ | ಕೊಂಡು ದೇವಾಕ್ಷ ಸೊಪ್ಪುಲು ಬೆಂಬೊತ್ತಿ || ತಾಮಸನನು ಕೊಂದು ಧರಣಿಯ| ತಂದ ನೀ ಮಹಾ ವಾರಾಹ ನೋಡಯ್ಯ ||೩|| ತರಳನು ಮೊರೆ ಯಿಡೆ ಕಂಬದಿ| ಬೇಗ ಪೊರಟನು ನರಹರಿ ರೂಪದಿ||ಕರುಳ ಬನೆಸಾ ದೈತ್ಯನ ಕೊಂದ| ಮತ್ತೆ ಧರಣಿಯ ನಳೆದು ಬಲಿಯ ಗೆದ್ದ ||೪|| ಧರಣಿಯ ಮೊರೆ ಕೇಳಿ ಬೇಗದಿ| ಮುನಿತರಳನಾಗಿಯೆ ರಾಮ ರೂಪದಿ || ದೊರೆಗಳೆಲ್ಲರ ನಟಿ

ಬಡಿದನು | ಎಂದು ವರೆಯೆ ಕೊಳುತ ಜೈದ್ಯ ನುಡಿದನು ||೫||

[ರಾಗ ಕೇದಾರ ಗೌಳ ತಾಳ ಝಂಪೆ)

ಎಲವೊ ಹಳೆ ಮುದುಕ ಕೇಳೋ| ಹೊಸ ಕಥೆಯು ತಿಳುಹಿದವರಾರು ಪೇಳು|| ಜಲಚರವು ಕಮಠ ಕ್ರೌಂಚವೆಂಬವರ | ಬಲುಮೆ ಘನವಾಯ್ತೆ ಮೂಢ ||೧|| ಸಂಭವಿಸಿದಖಗನನ್ನು ಬಾಧಿಸಲು| ಸಂಭವಿಸಿತಘವವನನೂ|| ಕಂಬದೊಳಗಿರ್ದ ಮೃಗವು ಕೊಂದುದಿವ| ನೆಂಬುದಿನ್ಯಾವ | ನಿಜವೂ ||೨|| ಬಲಿಯೊಡನೆ ಮೋಸಗೈದು ಕೇಳಿದರೆ ಫಲವೆ ಬಾಗಿಲ ಕಾಯ್ದುದೂ|| ಇಳೆಯು ಪಾಲಕರೆಲ್ಲರೂ | ವಿಪ್ರಸುತ ಗಳುಕಿದವರಲ್ಲ ಬಲರೂ ||೩|| ಅರರೆ ಸಾಕಿನ್ನು ಮುದಿಯಾ| ನಾನೆಲ್ಲವರಿತಿರುವೆ ಪೇಳ್ದ ಕಥೆಯಾ| ದುರುಳ ಗೋಪನಸುತನನೂ ಹೊಗಳಿ ಬಹು| ಪರಿಯಿಂದ ಪಣಿದೆ ನೀನೂ ||೪|| ಇನ್ನೇನು ಕಥೆಗಳಿಹುದು ಪೇಳಿದರೆ| ಹೊನ್ನು ವಚನಗಳು ಬಹುದೂ || ನಿನ್ನ ಪೋಲರಿತರಿಲ್ಲಾ ಎಂದು ಮನವನ್ನು ನಿರ್ಧರಿಸಿದೆಯಲಾ ||೫|| **ಭಾಮಿನಿ**— ಭೂಪತಿಗಳಿರುತಿರಲು ಮುಂಚದಿ | ಸ್ಥಾಪಿಸಿದೆ ಕರೆತಂದು ಸಭ್ಯದಿ| ರೀಘಟಂಗನ ಕುಳ್ಳಿರಿಸುವರೆ ಭೀಷ್ಮ ಪೇಳೆಂದ || ಗೋಪಿಯರ ಮಿಂಡನಿಗೆ ಪೂಜೆಯೆ| ಕಾಪುರುಷ ನಿವಯೋಗ್ಯನೆನ್ನೈ | ಛಾಪುರೇ ಭಳಿರೆಂದು ಘರ್ಜಿಸಿ ನುಡಿದನಾಜೈದ್ಯ ||೧|| **ಕಂದಪದ್ಯ**—ಈ ತೆರದಿಂ ಲಕ್ಷ್ಮಿಮೀನಾಥನ ಜರೆಯುಲ್ಕೇಳ್ದು | ವಾತಾತ್ಮಜ ಗದೆಗೊಂಡಾಕ್ಷಣ ನದೀಜಾತನೋಳ್ಂತೆಂದಂ||

[ರಾಗ ಮಾರವಿ ಏಕ ತಾಳ]

ಹರಿಯನು ಕೆಡನುಡಿದಿರುವ ದುರಾತ್ಮನ| ಶಿರವನು ಕೆಡಹುವೆನು || ಅರೆ ನಿಮಿಷದೊಳೆಂದೇಳಲಿಕೆದು ಬಲ| ಪೋಟಟುದು ಘರ್ಜಿಸುತ ||೧|| ನಿಂದಿಪುದುಚಿತವೆ ಬಹುಪರಿ ಗಂಗಾ| ನಂದನ ಸಹನೃಪನ|| ಇಂದಿವನನು ಬಡಿದುರುಳಿಪೆ | ನೆನೆ ತಡೆದೆಂದನವಗೆ ಭೀಷ್ಮ || ಸಂತವಿಸ್ಯೆ ತವ ಕ್ರೋಧವ ನೀನ್ಯಾಕಿಂತು ಸುಯಾಗದೊಳು||ಚಿಂತೆಗಳ್ಯಾತಕೆ ನಮ್ಮನು ಶ್ರೀ ಭಗವಂತನು ರಕ್ಷಿಸುವ ||೪||

(ರಾಗ ಮಾಧು ಮಾಧವಿ ಅಷ್ಟತಾಳ)

ಮರುತ ಸಂಭವನೆ ನೀ ಕೇಳಯ್ಯಾ | ಈಗ | ಧರಿಸಿದ ಕೋಪದ ತಾಳಯ್ಯ || ಹರಿಯು ಕಾಯುವಡೆ ಸಮರ್ಥನೆ | ನೀನು | ಬರಿದೆ ಗರ್ಜಿಸಲ್ಯಾಕೆ ಸುಮ್ಮನೆ ||೧|| ಜಗದೋದ್ಧಾರನ ನಿಂದಿಪೆನೆಂದು ಬಾಯೊಳ್ | ಬಗು | ಳಿದಡೇನು ಬಾರದು ಕುಂದು || ನಿಗಮವಂದಿತ ಧುರ ಕಂಜಾತ || ಪೇಳ್ದ | ಹಗರಣವನು ಕೇಳ್ದನೆನ್ನುತ ||೨|| ತಿಳಿಯಬೇಡನಿಲಸಂಭವ ನೀನು | ಈತ ಜಲಜ ಸಂಜಾತನ ತಾತನು || ಬಲುಹನೀಕ್ಷಿಪಡೆ ಸಾಧ್ಯಗಳುಂಟೆ | ಎಷ್ಟು ಬಲನಾದರೇನೀತಗಿದಿರುಂಟೇ ||೩|| **ಭಾಮಿನಿ**—

ಸುರರ ಬಾಧಿಸೆ ರಾವಣಾದ್ಯರು|ಸರಸಿಜಾಕ್ಷಗೆ ದೂರೆ ಕೇಳ್ದವ|ತರಿಸಿ ಮರ್ಕಟ ಬಲದೊಡನೆ ಮುತ್ತಿದನು ಲಂಕೆಯನೂ || ತರಿದು ದುಷ್ಟರ ಕುಲವ ನಿಮಿಷದಿ| ಧರೆಯ ಭಾರವ ನಿಳುಹಿ ಶ್ರೀಹರಿ | ಸುರರ ಸಂತೋಷಿಸಿದ ನಾರಾಮಾವತಾರದಲೀ ||೧||

(ರಾಗ ಮಧ್ಯಮಾವತಿ ತಾಳ ತ್ರಿವಿಡೆ)

ಇಂಥಾ ಮಹಾ ಮಹಿಮ ನೋಡನೀ ಪಂಥ | ಪೌರುಷವ್ಯಾಕೆ ಚೈದ್ಯ ನಿನ್ನಂತೆ ನೃಪರಿಹರಿವರು ಹಳಿವರೆ| ಕಂತು ಪಿತನನು ಸಭೆಯೊಳು ||೧|| ಹಿಂದೆ ಮಧುಕೈಟಭಸುಮಾಲಿಯು | ಕೊಂದನಿವ ಮುರ ನರಕ ದೈತ್ಯರ | ವೃಂದವೆಲ್ಲಿದೆ ತೋರಿಸೈ ಜರಾಸಂಧನಿರವೇನಾಯಿತೂ ||೨|| ತರಳ ಧ್ರುವ ಪ್ರಹ್ಲಾದ ಮುಖ್ಯರು | ಶರಣಾದ ವಿಭೀಷಣಾಸುರ | ಹರಿಯು ಭಜಕರ ದಾಸರಿಗೆ ಭಯದೊರೆಯದೆಂದಿಗು ನೋಡಿಕೋ ||೩|| ಶರಣರಿವರನು ಕೊಂದರೇ ಪೋದ | ಬೊರದವರು ಜೀವಂತರಾದರೆ | ಬರಿದೆ ನೀ ಕೆಡಬೇಡ ಕಡ್ಡಿಯ | ಮುರಿದು ಸಾರಿದೆ ನಿಜವಿದೂ ||೪|| ಬಲಿಯು ಗರ್ವದೆ ಬಂಧಿಸಿದ ಕಡಿ | ದಿಳುಹಿದನು ಬಾಣನ ಕರಾಘವ | ತಿಳಿದು ನೀ ಕೆಡಲ್ಯಾಕೆ ಕೃಷ್ಣನ| ನಲಿದು ಭಕ್ತಿಗಳಿಂದಲೀ ||೫||

(ರಾಗ ಕಾಂಭೋಧಿ ಝಂಪೆ ತಾಳ)

ವಂದಿಸಲು ಚೈದ್ಯ ಕಡಿಬಂದವನಿ ಗರ್ಜಿಸುತ | ಬೆಂದನಾ ಕಲಿಭೀಷ್ಮ

ನೊಡನೇ || ಹಿಂದೆ ನಾಸಿರಲಿ ಕಳಿಯುವದುಂಟೆ ಊರ್ವದು | ಕಂದರಾದ್ಯಖಿಳ
ಸುರಬಲವೂ ||೧|| ಮಂಗ ಮುಸುಕರಡಿಗಳು ಸಿಂಗಳಿಕ ಸಹಿತ ರಣ |
ರಂಗದೊಳು ರಾಮನೆಂಬಾತಾ | ತುಂಗವಿಕ್ರಮರ ಕೊಲ್ಲುವ ಸಮಯ ತಾ
ನಿರದೆ | ಭಂಗವಾಯಿತು ಸುವಿಕ್ರಮಕೇ ||೨|| ಮಾನಿನಿಯ ತಂದು
ಸೇವಿಸದಿರಿಸಿದುದರಿಂದ | ವಾನರಗೆ ಬರಲು ಪಥವಾಯ್ತು ಕೋಣಪರ ಕುಲಕೆ
ಹಳುವನು ತಂದ ರಾವಣನು | ಮಾನವರ ಸಮರದಲಿ ಮಡಿದೂ ||೩||
ಕುಲಕೆಡುಕ ನೀಚ ಷಂಢನು ಜೀವಗಳ್ಳ ಪರ | ಬಲಕೆ ಸಹಾಯಗನಾದ ಕತದೀ |
ಗೆಲಿದನಲ್ಲದೆ ರಾಮನೆಂಬಾತ ರಾವಣನ | ಗಳಹದಿರು ಭೀಷ್ಮ ನೀ ಕಥೆಯಾ ||೪
ಹಳೆಯ ಹದ್ದೇರಿ ನೆಲಕಲಿವ ನೆರಿಯುಡುಗೆಯುಂ ಡೊಳಿವ ಕಸ್ತೂರಿ ನಾಮ
ದಲೀ || ಲಲನೆಯರ ವರಗೈಯ್ಯ ದೇವತ್ವ ಬಂದಪ್ಪುದೆ | ಹಳಿ ಗೂನೆ ನಿನ
ಗೆಷ್ಟು ಮಾತೂ ||೫|| ಹಸ್ತಿನಾಪುರದಿ ಕೌರವನನ್ನು ತಿಂದ ಮದ |
ಮಸ್ತಿಯಲಿ ಮುದಿ ಪ್ರಾಯ ನಿನಗೆ || ಇತ್ತ್ರ್ಯಾರಾದಡೊಂದಂಗನೆಯ
ಮದುವೆ ಮನ | ವಿತ್ತಲ್ಲವೇನೋ ಸುರನದಿಜ ||೬|| ಒಂಟೆ ವೈವಾಹಕೆ
ನೆಂಟರೆ ಶ್ವಾನಗಳು | ಬಂಟರಾಗುವರು ಮರ್ಕಟರೂ | ಕಂಟಗಾರ್ದಭನ
ಗಾನಕ್ಕೆ ನರಿ ಬೆರಗಾಗಿ ತಂತಣಿಸಿ ಶಿರದೂಗುವಂತೆ ||೭
ಜಾರಜರಯಾಗಕ್ಕೆ ಸರ್ವಾಧಿಕಾರವನು | ಜಾರ ಸಂಭವನೆ ಮಾಳ್ಪನು |
ಜಾರ ಗುರುವಿಗೆ ಪೂಜೆಯನು ಮಾಳ್ಪದನುಚಿತವೆ | ಮೂರು ಲೋಕಕೆ
ವಿಹಿತವಾಯ್ತು ||೮||

[ರಾಗ ಸೌರಾಷ್ಟ್ರ ತಾಳ ತ್ರಿವಿಡೆ]

ಎನಲು ಕೈಬೀಸುತ್ತ ಭೀಮನು ಕನಲಿಗದೆಯನು ಕೊಂಡು ಗರ್ಜಿಸಿ
ವಿನಯಿಸುತಲಿಂತೆಂದ ಗಂಗಾತನುಜನೊಡನೇ ||೦|| ದುಷ್ಟನಿವ ಕಡು
ಪಾಪಿ ಮೂರ್ಖರಿ | ಗೆಷ್ಟು ಹೇಳಿದರೇನು ಕ್ಷೀರವ ಕೊಟ್ಟಡಹಿಗುಣ ಸುಧೆಯ |
ಪ್ಪೋಲ್ವುದೆ ಸೃಷ್ಟಿಯೊಳಗೇ ||೨|| ಮೂಢರಿಗೆ ಶ್ರೀಹರಿ ಕಥಾಮೃತ |
ಪಾಡುವದು ವೇದವನು ಕಾಡಿನ | ಕೋಡಗನಿಗೊರೆದಂದವಾದುದು ರೂಢಿ
ಯಲ್ಲೀ || ಹರಿಗೆ ಕೆಡುನುಡಿದಿವನ ಜಿಹ್ವೆಯನರಿಯುವಳಿಯೆನು ನೋಡೆನು
ತ್ತಲಿ | ಭರಿತ ರೋಷದೊಳಿಟ್ಟು ಗದೆಯನು ತಿರುಹುತೆಂದಾ ||೪||

ರಾಗ ಘಂಟಾರವ| ಅಷ್ಟತಾಳ

ರಾಜಸೂಯ ಯಾಗದ ಸಭೆಯೊಳು ರಾಯ | ರಾಯರನೇಕರಿಹ ರ್ಮದುರಾಯನಿಗೆ ಕೆಡನುಡಿವರೇ ||೧|| ಬಲ್ಲರಿಲ್ಲವೆ ಇವನಷ್ಟು ಶಾಸ್ತ್ರವ| ಇಲ್ಲ ಸರಿ ತನಗೆಂಬ ಖೂಳನ ಹಲ್ಲು ಮುರಿವೆನು ನಿಮಿಷದೀ ||೨|| ಎಲ್ಲ ಯಾದವರೆಮ್ಮ ಪರೀಕ್ಷಣ | ಬಿಲ್ಲ ಹಿಡಿಯಲಿ ಬಲ ಸಹಿತ ಧುರ ಕುಲ್ಲಾಸ ದೊಳನುವಾಗಲೀ ||೩|| ಎಂದ ಮಾತನು ಕೇಳುತ್ತ ಶಿಶುಪಾಲ| ಮಂದ ಹಾಸದಿ ಕಿಡಿಯನುಗುಳುತ್ತಿಂದ ಗಂಗಾತ್ಮಜನೊಳು ||೪|| ವಂದೆ ಬೀಳಲು ಭೀಮನು ನೋಡೀಗ| ವಂದೆ ನಿಮಿಷದಿ ದಕ್ಷಯಾಗವ ಇಂದುಧರ ನನುವಾರ ಸುವೇ ||೫|| ದುರಳನೆಂದುದ ಕೇಳುತ್ತ ಭೀಮನು| ಕರ ಕರನೆ ಹಲುದಿನುತ ಲಾತನ ಕರೆದು ಪುತ್ತಿಂತೆಂದನೂ ||೬||

[ರಾಗ ಶಂಕರಾಭರಣ ತಾಳ ಮಟ್ಟೆ]

ಘಡ ಘಡೆಲವೊ ಚೈದ್ಯ ಕೇಳು ಕೃಷ್ಣ ಮೂರ್ತಿಯಾ| ಬಿಡದೆ ಹಳಿವುದು ಚಿತ್ರವಲ್ಲ ಕೇಳು ನಿನ್ನಯಾ || ಪಿಡಿದ ಗದೆಯೊಳೀಗ ಬಡಿವೆ ನೋಡೆನುತ್ತಲಿ| ನಡೆಯಲಾಗ ಭೀಷ್ಮ ಬಂದು ತಡೆದನಾಗಲೇ ||೧|| ತಡೆಯ ಬೇಡಿರೆನ್ನ ನೀಗ ದಕ್ಷಯಜ್ಞದ| ಮೃಡನ ಬಲುಹ ನೋಡ ಬೇಕೆನುತ್ತ ಮರುತಜ || ಗುಡುಗುಡುದಿಸಿ ಯದು ಭಟೌಘ ಪುರವಣಿಸಲು| ತಡೆದು ಭೀಮನೊಡನೆ ಭೀಷ್ಮ ನುಡಿದನಾಗಲೂ ||೨|| ಎಲವೊ ಪವನ ಜಾತ ಶೌರ್ಯ ಪಿತ್ತ ನಿನ್ನನೂ| ನಿಲಲುಗೊಡದೆ ಕುಣಿಸುತಿಹುದು ಏನನೆಂಬೆನೂ || ನಳಿನ ನೇತ್ರ ನಿನ್ನ ಕಾಯುವಡೆ ಸಮರ್ಥನೆ| ತಿಳಿದು ನೋಡು ಕಾಲವಾವು ದೆನುತ ಸುಮ್ಮನೆ ||೩||

[ರಾಗ ಸೌರಾಷ್ಟ್ರ ತಾಳ ತ್ರಿವಿಡೆ]

ಈಸು ಕಾರ್ಯವು ದೈವ ಘಟನೆಯೋ| ಈಸು ಪರಿ ಯಂತಾಯ್ತು ಯಜ್ಞದ ಮೀಸಲಳಿಯದೆ ನಿಮ್ಮ ಕನುಜನ ವಾಸನೆಯಲೀ ||೧|| ಇವನು ನಮ್ಮನೃಪಂಗೆ ತಂಗಿಯ| ಕುವರ ಸಹ ಇವನ್ನೈಸೆ ಯಾಗದಿ| ಹವದ ಗಂಟಕ್ಕ್ವನು ದೈವದ ಹವಣವೆಂತೋ ||೨|| ಈ ಸಮಸ್ತ ನೃಪಾಲಬಲ ವಾರಾಶಿ ಮೇರೆಯ ನೋವಪ್ಪತಿದೆ ನಿಮಗೈಸೆ ಭಾರವಿದೆಂದೆನುತ ಬಿನ್ನೈಸೆ ಯಮಜ||೩||

ಅಂಜದಿರು ಭಯಬೇಡ ನರರಿಗೆ | ನಂಜು ಪಥ್ಯವೇ ಗಿಳಿಯುಮರಿಗಳು|ಮಂಜರನ ಮೇಲ್ಬಾಯಲುಳಿವವೆ ಅಂಜಬೇಡ ||೪||

[ರಾಗ ಮಾರವಿ ಅದಿ ತಾಳ]

ಕೇಳುತ ಕುಳ್ಳಿರಲಾಗ | ಶಿಶು | ಪಾಲನ ಕಾಣುತ ಬೇಗ|| ಖೂಳರಿಗೀಘನ ಬಂತೇನಮ್ಮ | ಕಾಳಗ ಸರಸವಿದಾಯ್ತು ||೧|| ಹರಿ ವಿಧಿ ಬಿಡುಗಣ್ಣವರು | ಈ ಧರೆಯೊಳಗಿಹ ಭೂವರರೂ || ಕರವ ಮುಗಿದು ಜೀವಿಪರು| ತಮ್ಮ ಶಿರವನುಳುಹಿ ಕೊಂಡಿಪರೂ ||೨|| ಗೋಪನ ಸುತ ಪಾಂಡುಜರು | ಸಮನಾಪತಿ ಯನಗಿಂತವರೂ|| ರೂಪು ಯವ್ವನ ಸಿರಿ ಬಲದಿ | ಭುಜ ಚಾಪ ಕೌತುಕ ಸಂಗರದಿ ||೩|| ಶುದ್ಧ ಘಂಟಿಗನ ನೃಪರ ನಡು ಮಧ್ಯದೊಳಿರಿಸಿ ಪೂಜಿಪರ || ಗದ್ದಲ ನಿಲಿಸದಿರಲ್ಕೆ | ಯನಗಿದ್ದ ಪರಾಕ್ರಮವ್ಯಾಕೆ ||೪|| **ಭಾಮಿನಿ—** ಎನುತ ಶಿಶುಪಾಲಕನು ಘರ್ಜಿಸೆ|ಧನುವಕೊಂಡಾ **ಭೀಮಸೇನನು**|ಕನಲುತಿರೆ ತಡೆದೆಂದ ಗಂಗಾತ್ಮಜನು ಸಭೆಯೊಳಗೇ || ದನುಜಹರ ಭೂಭಾರ ಭಂಜನ| ಜೆನುವ ಕೆಲಸದೊಳೊಗೆದನಲ್ಲದೆ| ದಿನುಮಯನ ಕೃಷ್ಣಾವತಾರದ ಕಥೆಯ ಕೇಳೆಂದಾ ||೫||

[ರಾಗ ಶಂಕರಾಭರಣ ಅಷ್ಟ ತಾಳ]

ಇಳೆಯು ದೂರನು ಕೇಳಿ ಸುರರೆಲ್ಲ|ಪೋಗಿ ಜಲಜಾಕ್ಷಗರುಹ ಕೇಳುತ ಸೊಲ್ಲ || ನಳಿನಭವಾದ್ಯರಿಗೆಂದನು | ಯದುಕುಲದೊಳುದ್ಭವಿಸುವೆನೀ ಬಿನ್ನೊ ||೧|| ಪುಟ್ಟಿ ಯಾದವರಾಗಿ ಧರೆಯಲಿ | ನಾನು ಘಟ್ಟನೈದುವೆ ಕೃಷ್ಣನೆನುತಲಿ || ಕೊಟ್ಟ ಮಾತಿಗೆ ದೇವಕಿಯಲ್ಲಿ| ಬಂದು ಪುಟ್ಟಿದ ಖಳರನು ಘುರದಲಿ ||೨|| ವೈರವೆಣಿಪರ ಸಂಹರಿಸಿದ | ತನ್ನ ಸೇರಿದ ಜನರ ಸುದ್ಧರಿಸಿದ|| ಧೀರತ್ವ ನಡಪ್ರದೇ ಇವನಲ್ಲ | ಎನೆ ಮಾರುತಿ ಕೇಳಿದ ಮುದಲಿ||೩|| ಮುರುಳ ನಾಡಿದ ದುಷ್ಟ ಮಾತಿಗೆ | ರವೆಯುರಸ ನ್ಯಾತಕೆ ಕುಳಿತನು ಹೀಗೆ|| ಪರೆಯು ಬೇಕೆನಗೆಂಬ ಭೀಮಗೆ | ಪೇಳ್ದ ಸುರನದಿ ಜನು ಪವ ಮಾನಿಗೇ ||೪||

ಕಾಂಬೋದಿ — ಪೆ]

ಮರುತ ಸಂಭವನೆ ಕೇಳ್ದಿರಿಯು ಬಾಗಿಲ ಕಾಯುತಿರಲು ಜಯವಿಜ

ಮುದುಗಳಿಂದ || ಬರಲಾ ಸನತ್ಸುಜಾತರ ತಡೆದ ಕಾರಣದಿ ದೊರಕಿತಾಸುರ ಜನ್ಮ ಮೂರು ||೧|| ಕೃತಿಯೊಳು ಹಿರಣ್ಯಕಶ್ಯಪು ಕಾಶ್ಯಪಾತ್ಮಭವ | ರತಿ ಮುದದಿ ಸುರರ ಬಾಧಿಸಲು||ಪ್ರಥಮ ಜನ್ಮದ ಕ್ರೋಧನರಸಿಂಹ ರೂಪದಿಂದ ತುಳಿ ಬಲರನು ಕೆಡದ ಹರಿಯೂ ||೨|| ಮರುಭವದಿ ರಾವಣಾಸುರ | ಕುಂಭ ಕರ್ಣಾಸುರ | ತರುವಾಯ ಕೈಕಸೆ ಪುಲಸ್ತ್ಯಜನೆ || ಧರೆಯೊಳುದ್ಭವಿಸಿ ಬಾಧಿಸು ತಿರಲು ಸುರಪುರವು ಹರಿಗೆ ದೂರಿದುದು ತ್ರೇತೆಯಲೀ ||೩|| ಮಂದ ಹಾಸದಿ ದಶಕಂಧರನ | ನರಿಯಲು ರಾಮಾಭಿಧಾನದಲಿ | ಬಂದು ಮುದಿ ಯೊಳು ಖಳರ ವೃಂದವೆಲ್ಲನೊಂದ | ಸಂದಿತೆರಡು ಜನ್ಮಗಳೂ ||೪|| ಮೂರನೆಯೊಳಗ ದಮಘೋಷಸುತ ಶಿಶುಪಾಲ | ಘೋರದಂತ ಕೇಶವನಿಗೆ || ನಾರಿಸತಿ ಶ್ರುತದೇವಿಯೊಳು ದಂತವಕ್ತ್ರ ನೀ | ಧಾರುಣಿಯೊಳಗೆ ತಾವು ಜನಿಸರೂ ||೫|| ಜನಿಸುತಿರೆ ಶಿಶುಪಾಲನಿಗೆ ಶಿರದೊಳು ನಯನ | ಮಿನುಗುತಿಹ ಕರನಾಲ್ಕರಿಂದ || ಮುನಿನಾರದನ ನೇಮದಿಂದ ಕೃಷ್ಣನ ಕರದಿ | ಜನನಿ ತಂದಿತ್ತಳರ್ಭಕನ ||೬|| ಸುರಮುನಿಪನೆಂದಂತೆ ನವನೇತ್ರ ಕರವಡಗೆ | ಹರಿಗೆ ಶ್ರುತದೇವಿ ವಂದಿಸುತ | ತರಳನ ಶತಾಪರಾಧವ ಕ್ಷಮಿಸಿ ಕಾಯ್ವುದೆನೆ | ತರುಣಿಗಿತ್ತನು ಭಾಷೆಯನ್ನೂ ||೭|| ತರಳನ ಶತಾಪರಾಧಕೆ ದಮಿಸುವುದಿಲ್ಲವ್ವ | ಮರುನುಡೇಡೆಂದು ಸೈರಿಸುತ || ವರವಿರುವ ಕಾರಣದಿ ಕಾಳತನೀ ಗೋವಿಂದ | ಮರುಳನಿವನಿಗೆ ಬೆದರುವನೇ ||೮|| ಇಂದಿವನ ಮರಣ ಕಂಗೈಸುವರೆ ನೀನೋ ಮು | ಕುಂದನೋ ವಿಚಾರಿಸೆಲೆ ಭೀಮ | ನಿಂದಿರಲು ಬೇಡ ನಡೆಯೆಂದೆನಲು ಕೇಳ್ದು ಸಿಡಿ | ಲಂದದಲಿ ನುಡಿದ ಶಿಶುಪಾಲಾ ||೯||

[ರಾಗ ಕೇದಾರಗೌಳ ತಾಳ ಝಂಪೆ]

ನಂದಜನು ನನ್ನ ಧುರದಿ| ಕೊಲುವ ಕಥೆಯೊಂದ ಕೇಳ್ದೆನು ತೋಷದಿ ಇಂದು ಈ ಮುದಿ ಭೀಷ್ಮನ | ಕೆಡದ ಹೊರ್ತಿಂದು ಬಿಡೆನೀ ಭೀಮನು ||೧|| ಕೊಲುವವನೆ ಹುತ ನನ್ನ | ಇವನಿಂದ | ಉಳಿವವನೆ ತಾನು ಮುನ್ನ || ಹಳೆಯವಗೆ ಭ್ರಮೆಯಾಯಿತು| ಇವನದೆ | ಗಳಿಸಿ ಫಲ ಮೋಸಬಂತೂ || ೨ || ಕಲಿಗೆಡುಕ ಕಳ್ಳಸಟನ ಪರಯುವ ಬ | ಲಿಯರನ್ನು ಭೋಗಿಸುವನ ||

ಪಳಿಯ ಹದ್ದೇರಿ ಮೆರೆವ| ನೀತಸುರ | ಕುಲಕಾಹುಮಂಜಿ ದೇವ ||೩|| ಯೂಳರಿಗೆ ಜಗದೊಡೆಯನು | ಭ್ರಷ್ಟರೊಳು | ಮೇಲಾದ ದೈವ ಇವನೊ || ಈತನೇ ದೈವವೇನು | ಕ್ಷಣದಿ ಯಮ | ಜಾತಗೈಯ್ಯುವ ಮಬಿಪನೊ ||೪|| ಮಾತು ಮಾತಿಲಿ ಕೆಡಿಸುವೆ / ಭೂಭುಜ | ಮಾತ್ರವನು ಸಂಹರಿಸುವೆ || ಸಲಹಲಿವ ನೋಳ್ಪೆ ನಾನು| ನಾ ಬಡಿದು | ಕೊಲುವ ಸಮಯದೊಳೀತನೊ ||೫||

(ರಾಗ ಮಾರವಿ ಏಕ ತಾಳ)

ಎಲಪ್ರೊ ಗೋವಳ ಮಂಚವಬಿ ಟ್ಟಿನ್ನಿಳಿ ಗವತರಿಸೀಗ | ಘಳಿಲನೆ ನಾನೀ ದೇವರಿಗಸ್ತ್ರದ ಚಳಕದೋರ್ಜಿಸುವೇ ||೧|| ಸುಮ್ಮನೆ ಬದಿಯೊಳು ಕುಳ್ಳಿರದೆ ನೀ ನಮ್ಮೆಲ್ಲರ ನಡುವೆ | ಹೆಮ್ಮೆಯೊಳ್ಮಂಡಿಸಿ ಪ್ರಾಜ್ಯ ಗೊಂಡಾ ಹಮ್ಮನು ನಿಲಿಸುವೆನೊ ||೨|| ಬರಲೀಕ್ಷಣ ನೃಪರೆಸುತ್ತಲಿ ಚಪ್ಪರ ಡೊರಗ್ಗೆ ತರಲಾಗ || ಘುರ ವಾದ್ಯದ ರವ ಮೊಳಗಲು ಸೈನ್ಯವ ನೆರೆಯುಲಿ ಕರೆಬೇಗ ||೩|| **ಭಾಮಿನಿ**— ಕಂಡು ಮುನಿಗಳು ಬೆದರಿ ಭೀತಿಯ | ಗೊಂಡು ಕದಪಿನ ಕರದಿ ಕುಳ್ಳಿರೆ| ಮಂಡೆಯನು ತೂಗುತ ಭೂಪರು ಹರಿಯ ಜಪಿಸಿದರೂ || ಬಂದ ಭೂಪರು ಕೆಲರು ಜ್ಯೈಷ್ಯನ | ತಂಪೆದೊಳು ಸೇರಲ್ಕೆ ತದುಭಯ / ಗೊಂಡು ಧರ್ಮಜ ಸುಮ್ಮನಿರೆ ಕಂಡೆಂದ ನಚ್ಯುತನೊ ||೧||

[ರಾಗ ಮಧು ಮಾಧವಿ ಏಕ ತಾಳ]

ಕೇಳಿರೈ ಮುನಿಗಳು ಭೂಮಿಪರೆಲ್ಲ| ಖೂಳನಾಡಿರುವ ದುರ್ವಚನಗಳನೆಲ್ಲ || ಲಾಲಿಸಿದಿರೆಲಾ ವಿಹಿತವಾಯ್ತೆ ನಿಮಗೆ| ಪಾಲಿಪ್ರದೆಂತು ತಿಳಿಸು ಪೇಳಿರೆನಗೇ ||೧|| ಕಾಲಜ ನರಭೀಮಾದ್ಯರು ನಮೀಸುತರು | ಪೇಳಿದ ಪ್ರತಿ ವಚನವನು ಮೀರಿದನು || ಪಾಲಿಸದಪರಾಧವೆಸಗಿದ ಮೇಲೆ| ಕಾಳುವ ನಲ್ಲ ಮರ್ದಿಪುದು ನೀತಿಯುಲೀ ||೨|| ಧರಣಿಪಾಲಕರು ಮುನಿಗಳು ಭೂಸುರರು | ಸುರರು ದಿಕ್ಪಾಲರು ಕೇಳಿರೆಲ್ಲವರೂ || ದುರುಳನಾಡಿರುವ ಶಾಪರಾಧವನು | ಮರೆದು ಸುಮ್ಮನೆ ಕುಳಿತದನು ಪೇಳುವೆನು ||೩||

[ರಾಗ ಕೇದಾರಗೌಳ ಅಷ್ಟ ತಾಳ]

ಮತ್ತುಯ್ಯ ಶೂರಸೇನನು ಶ್ರುತದೇವಿಯು | ಪ್ರಥ್ವಿಪ ದಮ ಘೋಷಗೆ|| ಇತ್ತನು ವಸುದೇವನ ಸಹೋದರಿಯಾಕೆ ಹೆತ್ತಳೀ ಶಿಶುಪಾಲನ || ೧ || ಮರುಳನುದ್ಭವಿಸುವಾಗಧಿಕಾಕ್ಷಿ ಶಿರದೊಳ | ಗೆರಡು ನೂತನ ಭುಜದಿ || ಇರಲಿ ಕದ್ಭುತ ರೂಪವನು ಕಂಡು ಇವನವ್ವ | ಮರಗುತ್ತಲಿರುತಿರಲು||೨|| ಅತ್ತೆಗೆ ಪುತ್ರನಾದುದ ಕೇಳಿ ನೋಳ್ಪನಿ | ಮಿತ್ತದಿ ನಾ ಪೋಗಲು || ಹಸ್ತದಿ ಶಿಶುವೀಯು ಲಡಗಿತು ಸುರಮುನಿಪ್ರೋಕ್ತಮ ಪೇಳಿದಂತೆ||೩||ಕಂಡಳಧಿಕ ನೇತ್ರ ಬಾಹುವಡಗೆ ಭಯ | ಗೊಂಡಳಿವನ ಜನನಿ|| ದಂಡದಂತೆರಗಿ ಶತಾಪರಾಧವ ಮರೆ | ಗೊಂಡೆನ್ನ ನಿವನೆಂದಳೂ ||೪|| ತಾಯೆ ಕೇಳೆನಗೆ ಶತಪರಾಧವ ನೀತ | ಗೈಯಲು ಕ್ಷಮಿಪೆನೆಂದು || ಕೈಯ್ಯ ಮೇಲ್ಭಾಷೆಯು ಕೊಟ್ಟದಕಿವ ನಿಪ್ಪ | ಬೈಯ್ಯಲು ಕೇಳಲಾಯ್ತು ||೫||

(ರಾಗ ಸೌರಾಷ್ಟ್ರ ತಾಳ ತ್ರಿವಿಡೆ)

ಮಾನಿಗಳಂಜದಿರಿ ನೃಪ| ಜನಕೆ ಗಜಬಜ ಬೇಡ ಯಾದವ | ಜನಪರುರ ಮಹಿಸದಿರಿ ಪಾಂಡವ ತನುಜರಿಂಗೆ ||೧|| ಮೊನೆ ನಗೆಯ ಸಿರಿಮೊಗವನೆಗಳಿದ | ಜನತೆ ಹಸ್ತಾಂಬುಜವ ತೋರುತ | ವಿನುತ ಚಕ್ರವ ಪಿಡಿದು ಪಾಂಡವ ತನುಜರಿಂಗೆ ||೨|| ಶರಣರಿಗೆ ಬಂದೆಡರ ಪರಿಸುವ | ಬಿರಿದು ನಮ್ಮದಿ ದೈಸಿ ಯಾಗವ| ಹೊರಿಗೆ ನಿನಗ್ಯಾಕೆಮ್ಮದೈ ನೀನರಿಯುದವನೇ||೧||
ವಾರ್ಧಿಕ—ಸಲ್ಲಿಸಿದ ತಾಯ್ಗೆ ಕೊಟ್ಟಿರ್ದ ಭಾಷೆಯ ಸಾಂಗ | ವಲ್ಲಿ ಸಾಗಿಸಿದೆ ಸೇರಿಸಿ ತಪ್ಪ ಪರಿಗಣನೆ | ಯಲ್ಲಿ ಕ್ಷಮಿಸಿದೆ ದುಷ್ಟನಾಡಿದ ಶತಾಪರಾಧಕೆ ಮೀರಿತಲ್ಲ ತಪ್ಪೆರಡುಗಳು||ಭುಲ್ಲವಿಸಿ ಯಜ್ಞಮಂ ಕೆಡಿಸುವೆನು ಬಂದಘೂ| ವಲ್ಲಭರ ಬಡಿವೆನೆಂದೆನುತಾಡಿ ದೀಪಾತಿ | ಸಲ್ಲಿ ಸೈರಿಸಲಾರೆ ನೆಂದು ಸಿಂಹಾಸನವ ನಿಳಿದು ಚಕ್ರವ ತುಡುಕು ತಲ್ಲಿ ಕದುರೋಷದಿಂದಾ|

(ರಾಗ ಸಾಂಗತ್ಯ ತಾಳ ರೂಪಕ)

ಮಂದರಧರ ಯಮಪ್ಯಂದವ ನಿಲಿಸಿದ ಹಿಂದೆ ಕರೆದೆಂದು ಧಂದವಲೆ|| ಮುಂದಿಪ ಶಿಶುಪಾಲ ಗದಿರಾಗಿ ಶರಹಿಡಿ| ದೆಂದ ಕೆಂಪ್ರೇಷದಿ ನಡು ನಗುತ||೧||

ವರಪತಿ ಪ್ರತಿ ನಿನ್ನ ಮಾತೆಗೋಸುಗ ಮತ್ಕರಿಸಿದೆ ನಪರಾಧ ಶತವ|| ಮುರುಳ ಕೇಳೆನಗೆ ಪಾತಕವಿಲ್ಲ ನಿನ್ನನು| ಧುರದೊಳು ಮರ್ದಿಸಲಿನ್ನು ||೨|| ಎಂದೆನೆ ಕಿಡಿಯುಗುಳುತ ಚೈದ್ಯ ನಿರ್ಜರ| ವೃಂದದಿ ವಂದ್ಯನಾದವ ನೊಡನೆ || ಬಂಧುಗಳನು ಸಮರದಿ ಗೆದ್ದ ಪಾತಕಿ। ಕೊಂದಪೆ ನಾನಿಂಗ ನಿನ್ನ ||೩|| ಎನಲೆಂದ ಹರಿಯು ನಿನ್ನಿಂದಾದ ಪಾಪಗಳೆನುತ ನಾ ಬಡಿವೆ ಕೇಳವರ || ಎನುತನ ಚೈದ್ಯನ ಶರಳಿಂದ ಮುಸುಕಿದ | ದನುಜ ವೈರಿಯು ಕೇಳ್ಭೂ ಪಶಿಯೋ ||೪||

(ರಾಗ ಕೇದಾರಗೌಳ ತಾಳ ಝಂಪೆ)

ಎಂದ ಶಿಶುಪಾಲ ನಾಗ| ನಮ್ಮಿದಿರು ಬಂದು ನೀ ಕುಳಿತೆಯಲ್ಲಾ || ಹಂದಿ ನೀ ಪೂಜ್ಯನೇನೋ| ಅಕೋ ದರ | ವೃಂದ ಪೂಜೆಯ ಗೈವೆನೊ ||೧|| ಮುರುಳ ಸಚರಾಚರದಲಿ | ವಂದಿಸಲು |ಬರುವುದರಸುತ್ತಿನ್ನ ಲೀ|| ಧರಣಿಯೊಳು ಪೂಜೆ ಮಾಳ್ಪ | ದೇವರನು| ಕರೆದು ತೋರೆನ್ನ ಲಿಸಿತು ||೨|| ಇರುವದೆನ್ನೊಳು ಸರ್ವವೂ| ಪೂಜಿಸಲು ದೊರಕುವದೆ ಪ್ರತಿ ದೈವವೂ | ಚರಣ ಭಜಕರ ಕೆಲಸಕೆ| ಮೂರ್ಖ ನೀ | ಬರಿದೆ ಮನ ಗುಂದಲ್ಯಾಕೆ ||೩|| ಕರದು ಕೆಣಕಲಿಕೆನ್ನನು| ನಾ ಕೇಳಿ ಬರಿದೆ ಬಿಡುವೆನೆ ನಿನ್ನನೂ || ಧುರದ ಕೊಡು ಕೊಡು ಯೆನ್ನುತ| ಬಲು ಕಠಿಣ| ತರದೊಳಂಭಯರು ಪೆಣಗುತ್ತ||೪|| ಹರಿಯು ಕಠಿಣದ ಯುದ್ಧದಿ | ರಣವಾದ್ಯ ಸುರರ ದುಂದುಭಿ ಘೋಷದಿ||ಸರಳುರಿಯು ಕಡು ಜ್ವಾಲಿಗೆ| ಉತ್ಪಾತ| ಮೆರೆಸಿದವು ಧರಣಿಯೊಳಗೇ ||೫||

[ರಾಗ ಸೌರಾಷ್ಟ್ರ ತಾಳ ತ್ರಿವಿಡೆ]

ಒಡನೆ ಯಮಸುತ ನಡುಗಿ ಭಯದಿಂ| ಪಡಿಗೆ ವಂದಿಸಿ ವ್ಯಾಸ ನಾರದರೊಡನೆ ಕೇಳಿದ ನೀ ಮಹಾದ್ಭುತ ಪೊಡವಿಯೊಳಗೇ ||೧|| ಒದಗುತಿದುದೇನೆನಲು ನುಡಿದರು| ಚಿದರ ಬೇಡ ನುರಾರಿ ದಾಟದೊಳಿದು ಮಹಾದ್ಭುತವೆನಲಿಕಿತ್ತಲು ಪದುಮನಾಭಾ ||೨|| ಬಿಸಸಿದನು ಚಕ್ರವನು ಧಾರಾ | ವಿಸರ ಧೂತಪುರಿ ಸ್ಫುಲಿಂಗ| ಪ್ರಸರ ತೇಜಃಕಾಂತಿರಸ್ಕೃತಪೆಸಿಯಲಾಗಾ||೩|| ದಿಸೆದಿಸೆಗೆ ಮುವ್ವಾಳಿಸುವ ಬೆಳ| ಕೆಸೆಯೆ ಬಂದು ಪುನೀತ ಕಂಠದ| ಬಿಸುಗೆ

ಬಿಡಲೆರಗಲಿಕೆ ಹಾಯ್ದಾಗಸಕೆ ಶಿರವೂ ||೪|| ಹರಿಗೊರಳ ಚೌಧಾರೆಯುಲಿದರು । ದುರಸಿ ನೋಕಿತು ರಕ್ತವದರಲಿ | ಮಿನುಪ ತೇಜಃಪುಂಜ ವಡಗಿತು ಹರಿಯು ಪದದೀ ||೫||

[ರಾಗ ಕಾಂಬೋಧಿ ತಾಳ ಝಂಪೆ]

ಮೊರೆಯಿಡುತ ಶಿಶುಪಾಲಕನ ಸೂನು ಕೃಷ್ಣನಡಿಗೆರಗಿ ಭಕ್ತಿಯೊಳುಂ ನುತಿಸುತ್ತ || ಕರುಣಾಳು ಸಲಹೆನ್ನ ಪಿತನ ದುರ್ನಡತೆ ಯೊಳುಂ | ಚರಣ ಹೊಂದಿವನೈಸೆ ನಿನ್ನ ||೧|| ಎಂದೆನುತ ಬಲಬಂದು ವಂದಿಸಲಿ ಕಡಿಗೆರಗೆ | ಮಂದರಧರನು ಕರುಣದಲಿ|| ಮುಂದಿನ್ನು ಭೀತಿ ಬೇಡೆಂದೆತ್ತಿ ಮೋಹದಲಿ | ನಂದನನ ಪಿಡಿದಪ್ಪುತಾಗಾ ||೨|| ತರಳ ನೀ ಬೆದರದಿರು ಇರುವೆ ಬೆಂಬಲಕಾನು | ವಿರಚಿಸಿವಗೌರ್ಧ್ವ ದೇಹಿಕವ || ಸ್ಥಿರದಿ ಚೈದ್ಯಾಧಿಪತಿ ಯಾಗೆಂದು ಪಟ್ಟವನು ಕರುಣಾಳುಂ ಹರಿಸಿ ಬೀಳ್ಕೊಳುತಾ ||೩|| ಶಿಶುಪಾಲ ಸಂಭವನ ವ್ಯಸನವನು ಪತಿಹರಿಪಿ ವಸುಧೆ ಪಾಲಕರ್ಗ ಸಂತೈಸಿ || ದೆಸೆದೆಸೆಗೆ ಹಾಯುತಿಹ ಸುಭಟರೆಲ್ಲ ಕೂಡಿ | ನಸು ನಗುತ ಕೃಷ್ಣ ದಯ ಮಾಡೆ ||೪||

[ರಾಗ ರೇಗುಪ್ತಿ ಏಕ ತಾಳ]

ಧರಿಣಿಪ ಕೇಳ್ ಶ್ರೀಹರಿಗೆ ಭಕ್ತರ ಮೇಲಿರುವ ದೇನ್ಸಂತೋಷಂ ಪ್ರಿಯ ಸತತಾ || ಧುರದಿ ಚೈದ್ಯನ ತನ್ನ ಚರಣದ ಮನೆಯೊಳ । ಗಿರಿಸಿ ವೈಕುಂಠಕೆ ಕಳುಹಿಸುತ ||೧|| ಬಂದಾ ಗೋವಿಂದ ಸಾನಂದದಿಂದಲಿ ಧರ್ಮನಂದನನಧ್ವರ ಶಾಲೆಗೆ ಬೇಗ || ಇಂದೀವರಾಕ್ಷ ನೈತಂದುದೀಕ್ಷಿಸಿ ಕುಂತಿ | ನಂದನರೆರಗೆ ಭಕ್ತಿಯೊಳಾಗಾ ||೨|| ಆಸನದಲಿ ಕುಳ್ಳಿರಿಸಿ ನೃಪವರ ಮುನಿಗಳ ನುಪಚರಿಸಿ || ಗೀರ್ವಾಣದಿ ಸಮಸ್ತರಿ ಗಭಯವ ಸಾರ್ವಭೌಮನು ತೋರ್ಣನತಿ ವಿಭವಾ ||೩|| ಚಿತ್ತದಿ ಸಂತೋಷಿಸುತಲಿ ಕುಂತಿಸು | ಪುತ್ರ ಗಂಗಾತ್ಮಜರಿರುತಿರಲೂ || ಇತ್ತ ರಾಹುತಿಯ ಪಾವಕನಿಗೆ ಹವಿಘೃತ | ವರ್ತಿಯ ಸಮಿಧ ಪ್ರವ್ಯಗಳಿಂದಾ ||೪||

ಕಂದ ಪದ್ಯ— ಯಾಗಾಂತ್ಯದೊಳಚ್ಯುತನಿಂಗಾಗಮೋಕ್ತ ವಿಧಾನ ದೊಳವನಂ ಭೂಪತಿ ತಾ೦ ಪೂಜಿಸಿ ಯೆತ್ತಿದನಾರತಿಯಂ ||

ರಾಗ ಸುರಟಿ ಏಕತಾಳ

ಹರಿ ಸರ್ವೋತ್ತಮ ರುಕ್ಮಿಣಿವರ ಶಂಕರ ಪ್ರಿಯ ಕೌಸ್ತುಭ ವನ ಮಾಲಾ || ಸುರಪಾಲಾ || ಸುರಪಾಲಿತ ಗಂಗಾ ತರುಣಿಯ ಪೆತ್ತಿಹ ಸಿರಿ ಚರಣಕಾರತಿಯ ಬೆಳಗೀರೇ ||೧|| ಧರಣಿಯ ಪ್ರಿಯ ಸುರಜೇಷ್ಠಾದ್ಯರು ಮೊರೆ ಇಡೆ ಕೇಳುತ ದೇವಕಿ ಯುದರದೊಳು ಬಂದೂ || ಕೃಪಾಸಿಂಧೂ| ಕೃಪಾಸಿಂಧುವೆಂದೆನಿಪ ಶ್ರೀಕೃಷ್ಣನ ಚರಣ ಕಾರತಿಯ ಬೆಳಗೀರೇ ||೨||